## ಹಂಪಿ ಕನ್ನಡ ವಿಶ್ವವಿದ್ಯಾಲಯದ 32ನೇ ನುಡಿಹಬ್ಬ

# ಮೂವರಿಗೆ ನಾಡೋಜ ಪ್ರದಾನ

■ ವಿಕ ಸುದ್ದಿಲೋಕ ವಿಜಯನಗರ (ಹೊಸಪೇಟೆ)

ಹಂಪಿ ಕನ್ನಡ ವಿಶ್ವವಿದ್ಯಾಲಯದ 32ನೇ ನುಡಿಹಬ್ಬ (ಘಟಿಕೋತ್ಸವ), ವಿವಿಯ ನವರಂಗ ಬಯಲು ರಂಗಮಂದಿರದಲ್ಲಿ ಬುಧವಾರ ಸಂಜೆ ಅದ್ದೂರಿಯಾಗಿ ಜರುಗಿತು.

ನುಡಿಹಬ್ಬದಲ್ಲಿ ಬೀದರ್ ಜಿಲ್ಲೆ ಭಾಲ್ಕಿ ಹಿರೇಮಠ ಸಂಸ್ಥಾನದ ಡಾ.ಬಸವಲಿಂಗ ಪಟ್ಟದೇವರು, ಆಂಧ್ರಪ್ರದೇಶ ವಿಜಯನಗರದ ಕೇಂದ್ರೀಯ ಬುಡಕಟ್ಟು ವಿಶ್ವವಿದ್ಯಾಲಯ ಕುಲಪತಿ ತೇಜಸ್ವಿ ವಿ.ಕಟ್ಟಿಮನಿ ಹಾಗೂ ಬೆಂಗಳೂರಿನ ಎಸ್.ಸಿ.ಶರ್ಮಾ ಅವರಿಗೆ 'ನಾಡೋಜ ಗೌರವ ಪದವಿ' ಪ್ರದಾನ ಮಾಡಲಾಯಿತು.

ಲಲಿತಕಲೆಗಳ ನಿಕಾಯದ ವಿ.ಶ್ರೀನಿವಾಸಮೂರ್ತಿ ಅವರಿಗೆ ಜಾನಪದ ಮತ್ತು ಬುಡಕಟ್ಟು ಜೀವನ ವಿಧಾನಗಳ ದಾಖಲೀಕರಣ: ಸವಾಲು ಮತ್ತು ಸಾಧ್ಯತೆಗಳು ಶೀರ್ಷಿಕೆಯಡಿ ಡಿ.ಲಿಟ್. ಪದವಿ ಪ್ರದಾನ ಮಾಡಲಾಯಿತು. ಭಾಷಾ ನಿಕಾಯದ 104, ಸಮಾಜವಿಜ್ಞಾನಗಳ ನಿಕಾಯದಲ್ಲಿ 167, ಲಲಿತಕಲೆಗಳ ನಿಕಾಯದ 4 ಸೇರಿ ಒಟ್ಟು 275 ವಿದ್ಯಾರ್ಥಿಗಳಿಗೆ ಪಿಎಚ್‌ಡಿ ಪದವಿ ಪ್ರದಾನ ಮಾಡಲಾಯಿತು.

ಅನಂತಪುರಂ ಆಂಧ್ರಪ್ರದೇಶ ಕೇಂದ್ರೀಯ ವಿಶ್ವವಿದ್ಯಾಲಯದ ಕುಲಪತಿ ಡಾ.ಎಸ್.ಎ.ಕೋರಿ ಅವರು, ನುಡಿಹಬ್ಬ-ಘಟಿಕೋತ್ಸವದ ಭಾಷಣ ಮಾಡಿದರು. ''ಆಧುನಿಕ ತಂತ್ರಜ್ಞಾನ ವಿದ್ಯಾರ್ಥಿಗಳ ಕಲಿಕೆಗೆ ಪೂರಕವಾಗಿ ಬಳಕೆಯಾದಾಗ ಕನ್ನಡ ನೆಲದ ಬದುಕು ಹಸನಾಗಬಹುದು. ಮಾಹಿತಿಗಳೇ ಸಂಶೋಧನೆಗಳಾಗಲಾರವು. ಆಳಕ್ಕೆ ಇಳಿದು ಜ್ಞಾನವನ್ನು ಶೋಧಿಸಿ ಅದರ ಸತ್ವವನ್ನು, ಸಂದೇಶವನ್ನು ಸಮಕಾಲೀನ ಸಮಾಜಕ್ಕೆ ಕೊಡಬೇಕಾದದ್ದು ಇಂದಿನ ತುರ್ತುಗಳಲ್ಲಿ ಒಂದು. ವಿವಿಯ ಉದ್ದೇಶಕ್ಕೆ ಅನುಗುಣವಾಗಿ ಜ್ಞಾನವನ್ನು ಕನ್ನಡದಲ್ಲಿ ಪಸರಿಸಲು ಸಾರ್ವಜನಿಕರು, ಸರಕಾರಗಳು ಬೆಂಬಲ ನೀಡಬೇಕಿದೆ,'' ಎಂದರು.

ಕುಲಪತಿ ಡಾ.ಡಿ.ವಿ.ಪರಮಶಿವಮೂರ್ತಿ ಪ್ರಾಸ್ತಾವಿಕ ಮಾತನಾಡಿ, ''ವಿವಿಯು ಕನ್ನಡದ ಅರಿವು ವಿಸ್ತರಿಸುವ, ಕನ್ನಡದ ಅಧ್ಯಯನಕ್ಕೆ ಆಕರಗಳನ್ನು ನಿರ್ಮಿಸುವ, ಅಧ್ಯಯನದ ಹೊಸಹೊಸ ವಿಧಾನಗಳನ್ನು ರೂಪಿಸುವ ಜತೆಯಲ್ಲೇ ಸಮಾಜದ ಹಿತಚಿಂತನೆಯ ಭಾಗವಾಗಿ ಸುತ್ತಲಿನ ಐದು ಗ್ರಾಮಗಳನ್ನು ದತ್ತು ಪಡೆದಿದೆ. ಅಲ್ಲಿ ಆರೋಗ್ಯ, ಸ್ವಚ್ಛತೆ ಮತ್ತು ಶಿಕ್ಷಣದ ಮಹತ್ವದ ಬಗ್ಗೆ ಅರಿವು ಮೂಡಿಸುತ್ತ ಕನ್ನಡ ಕಟ್ಟುವ ಕ್ರಿಯೆಯಲ್ಲಿ ತೊಡಗಿಸಿಕೊಂಡಿದೆ,'' ಎಂದರು. ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಅವರು, ಡಿ.ಲಿಟ್ ಹಾಗೂ ಪಿಎಚ್‌ಡಿ ಪದವಿಗಳನ್ನು ಪ್ರದಾನ ಮಾಡಿದರು.

ನುಡಿಹಬ್ಬಕ್ಕೂ ಪೂರ್ವದಲ್ಲಿ ಕನ್ನಡ ವಿವಿಯ ಸೂರ್ಯಚಂದ್ರ ಬೀದಿಯಿಂದ ನವರಂಗ ಬಯಲು ರಂಗ ಮಂದಿರದವರೆಗೆ ವೈಭವದ ಮೆರವಣಿಗೆ ನಡೆಸಲಾಯಿತು. ಕುಲಸಚಿವ ಡಾ.ವಿಜಯ್ ಪೂಣಚ್ಚ ತಂಬಂಡ, ನಾನಾ ವಿಭಾಗಗಳ ಮುಖ್ಯಸ್ಥರು, ಡೀನ್‌ಗಳು, ಸಿಂಡಿಕೇಟ್ ಸದಸ್ಯರು ಸೇರಿ ಇತರರಿದ್ದರು. ಕೋವಿಡ್ ದೃಢಪಟ್ಟಿದ್ದರಿಂದ ರಾಜ್ಯಪಾಲರು ನುಡಿಹಬ್ಬಕ್ಕೆ ಗೈರುಹಾಜರಾದರು.



ಹಂಪಿ ಕನ್ನಡ ವಿಶ್ವವಿದ್ಯಾಲಯದ 32ನೇ ನುಡಿಹಬ್ಬದಲ್ಲಿ ಬೀದರ್ ಜಿಲ್ಲೆ ಭಾಲ್ಕಿ ಹಿರೇಮಠ ಸಂಸ್ಥಾನದ ಡಾ.ಬಸವಲಿಂಗ ಪಟ್ಟದೇವರು, ಆಂಧ್ರಪ್ರದೇಶ ವಿಜಯನಗರದ ಕೇಂದ್ರೀಯ ಬುಡಕಟ್ಟು ವಿಶ್ವವಿದ್ಯಾಲಯ ಕುಲಪತಿ ತೇಜಸ್ವಿ ವಿ.ಕಟ್ಟಿಮನಿ ಹಾಗೂ ಬೆಂಗಳೂರಿನ ಎಸ್.ಸಿ.ಶರ್ಮಾ ಅವರಿಗೆ ಬುಧವಾರ 'ನಾಡೋಜ ಗೌರವ ಪದವಿ' ಪ್ರದಾನ ಮಾಡಲಾಯಿತು.

## ಪಿಎಚ್‌ಡಿ ಪಡೆದ ಬುಡಕಟ್ಟು ಸಮುದಾಯದ ಮೊದಲ ಯುವತಿ

**ವಿಜಯನಗರ (ಹೊಸಪೇಟೆ):** ಮೈಸೂರು ಜಿಲ್ಲೆ ಹೆಗ್ಗಡದೇವನಕೋಟೆ ತಾಲೂಕಿನ ಸೇಬಿನಕೊಲ್ಲಿ ಹಾಡಿಯ ಫಣಿಯನ್ ಬುಡಕಟ್ಟು ಸಮುದಾಯದ ಎಸ್.ಆರ್.ದಿವ್ಯ ಅವರು ಹಂಪಿ ಕನ್ನಡ ವಿಶ್ವವಿದ್ಯಾಲಯದ 32ನೇ ನುಡಿಹಬ್ಬದಲ್ಲಿ ಪಿಎಚ್‌ಡಿ ಪದವಿ ಪಡೆಯುವ ಮೂಲಕ ಇಂತಹ ಪದವಿ ಪಡೆದ ಬುಡಕಟ್ಟು ಸಮುದಾಯದ ಮೊದಲ ಯುವತಿ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ಸಮುದಾಯದ ಯಾರೊಬ್ಬರೂ ಇದುವರೆಗೆ ಪದವಿ ಹಂತದ ಶಿಕ್ಷಣ ಪೂರೈಸಿರಲಿಲ್ಲ. ಮನೆಯಲ್ಲಿ ವಿದ್ಯುತ್ ಸಂಪರ್ಕ ಇಲ್ಲದಿದ್ದರೂ ಈ ಯುವತಿ ಸಾಧನೆಯಲ್ಲಿ ಹಿಂದೆ ಬಿದ್ದಿಲ್ಲ ಎಂಬುದು ವಿಶೇಷ. ವಿವಿಯ ಬುಡಕಟ್ಟು ಅಧ್ಯಯನ ವಿಭಾಗದ ಪ್ರೊ.ಕೆ.ಎಂ.ಮೇತ್ರಿ ಅವರ ಮಾರ್ಗದರ್ಶನದಲ್ಲಿ 'ಫಣಿಯನ್ ಬುಡಕಟ್ಟಿನ ಸಾಮಾಜಿಕ ಅಧ್ಯಯನ' ವಿಷಯದಲ್ಲಿ ಅವರು ಪಿಎಚ್‌ಡಿ ಪದವಿ ಪಡೆದಿದ್ದಾರೆ. 2011ರ ಜನಗಣತಿ ಪ್ರಕಾರ ಕರ್ನಾಟಕದಲ್ಲಿ 495 ಫಣಿಯನ್ನರು ನೆಲೆಸಿದ್ದಾರೆ.



ಕೊಡಗಿನಲ್ಲಿ ಫಣಿಯನ್ ಸಮುದಾಯದವರು ಜೀತ ವ್ಯವಸ್ಥೆಯಲ್ಲಿದ್ದಾರೆ. ನನ್ನ ಸಮುದಾಯಕ್ಕೆ ಮಹತ್ವದ ಕೊಡುಗೆ ನೀಡಬೇಕು ಎನ್ನುವುದು ನನ್ನ ಗುರಿಯಾಗಿದೆ.

**-ಎಸ್.ಆರ್. ದಿವ್ಯ** ಪಿಎಚ್ ಡಿ ಪದವಿ ಪಡೆದ ಬುಡಕಟ್ಟು ಸಮುದಾಯದ ಯುವತಿ.

## ವಿವಿಗಳ ಸಮಸ್ಯೆ ಪರಿಹಾರಕ್ಕೆ ಪ್ರಯತ್ನ

**ಹೊಸಪೇಟೆ (ವಿಜಯನಗರ):** ''ರಾಜ್ಯದ ವಿಶ್ವವಿದ್ಯಾಲಯಗಳ ವಿವಿಗಳ ಸಮಸ್ಯೆ ಪರಿಹಾರಕ್ಕೆ ಪ್ರಯತ್ನಿಸಲಾಗುವುದು,'' ಎಂದು ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ.ಸುಧಾಕರ್ ಹೇಳಿದರು. ಹಂಪಿ ಕನ್ನಡ ವಿವಿ ನುಡಿಹಬ್ಬದಲ್ಲಿ ಬುಧವಾರ ಪಾಲ್ಗೊಂಡ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ''ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಅನುದಾನ ಕೊರತೆ ನೀಗಿಸಲು ಡಿಎಂಎಫ್, ಕೆಎಂಆರ್‌ಇಸಿ ಅನುದಾನ ಬಳಕೆಗೆ ಸಂಬಂಧಿಸಿದಂತೆ ವಿಜಯನಗರ ಉಸ್ತುವಾರಿ ಸಚಿವ ಜಮೀರ್ ಅಹಮ್ಮದ್, ಬಳ್ಳಾರಿ ಉಸ್ತುವಾರಿ ಸಚಿವ ಬಿ.ನಾಗೇಂದ್ರ ಅವರ ಜತೆ ಚರ್ಚೆ ಮಾಡುವೆ. ಈಗಾಗಲೇ ಕೆಕೆಆರ್‌ಡಿಬಿ ಯಲ್ಲಿ ಶೇ.10ರಷ್ಟು ಕಲ್ಯಾಣ ಕರ್ನಾಟಕದ ವಿವಿಗಳಿಗೆ ಮೀಸಲಿಡಬೇಕು ಅಂತ ರಾಜ್ಯಪಾಲರು ಸೂಚಿಸಿದ್ದಾರೆ,'' ಎಂದರು.

Scanned with OKEN Scanner

# 'ಆರ್ಥಿಕ ಸಮಸ್ಯೆ ಪರಿಹರಿಸಲು ಪ್ರಯತ್ನ

## ಹಂಪಿ ಕನ್ನಡ ವಿಶ್ವವಿದ್ಯಾಲಯ 32ನೇ ನುಡಿಹಬ್ಬದಲ್ಲಿ ಉನ್ನತ ಶಿಕ್ಷಣ ಸಚಿವ ಭರವಸೆ

ಚಿತ್ರಗಳು: ಮೈನು





ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ನುಡಿಹಬ್ಬದ ನಿಮಿತ್ತ ಘಟಿಕೋತ್ಸವ ಮೆರವಣಿಗೆ ನಡೆಯಿತು. ನುಡಿಹಬ್ಬದಲ್ಲಿ ಪಿಎಚ್.ಡಿ ಪದವಿ ಪಡೆದ ವಿದ್ಯಾರ್ಥಿಗಳು ಪ್ರತಿಜ್ಞಾವಿಧಿ ಸ್ವೀಕರಿಸಿದರು. (ಬಲಚಿತ್ರ)

■ ವಿಕ ಸುದ್ದಿಲೋಕ ವಿಜಯನಗರ (ಹೊಸಪೇಟೆ)

ಸಂಶೋಧನಾ ಕ್ಷೇತ್ರಕ್ಕೆ ವಿಶಿಷ್ಟ ಹಾಗೂ ವಿಭಿನ್ನ ಕೊಡುಗೆ ನೀಡಿರುವ ಕನ್ನಡ ವಿಶ್ವವಿದ್ಯಾಲಯದ ಆರ್ಥಿಕ ಸಂಕಷ್ಟಗಳ ಕುರಿತು ಮುಖ್ಯಮಂತ್ರಿಗಳೊಂದಿಗೆ ಮಾತನಾಡಿ, ಶೀಘ್ರ ಪರಿಹಾರಕ್ಕೆ ಪ್ರಯತ್ನಿಸಲಾಗುವುದು ಎಂದು ಸಮಕುಲಾಧಿಪತಿಗಳೂ ಆಗಿರುವ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ ಅವರು ಭರವಸೆ ನೀಡಿದರು.

ಕನ್ನಡ ವಿವಿ ನುಡಿಹಬ್ಬದಲ್ಲಿ ಡಿ.ಲಿಟ್ ಹಾಗೂ ಪಿಎಚ್ಡಿ ಪದವಿಗಳನ್ನು ಬುಧವಾರ ಪ್ರದಾನ ಮಾಡಿ ಮಾತನಾಡಿದ ಅವರು, ಅಮೋಘ ಸಾಧನೆ ಮಾಡಿದ ಹಮ್ಮಿಯ ವಿವಿ ಅನುದಾನದ ಕೊರತೆಯಿಂದ ಸಂಶೋಧನೆ ಅಭಿವೃದ್ಧಿ ಹಾಗೂ ನಿರ್ವಹಣೆ ಚಟುವಟಿಕೆಗಳಲ್ಲಿ ಸಂಕಷ್ಟ ಎದುರಿಸುತ್ತಿರುವುದು ತಿಳಿದಿದೆ. ಹಾಗಾಗಿ, ಮುಖ್ಯಮಂತ್ರಿಗಳೊಂದಿಗೆ ಮಾತನಾಡಿ, ಪರಿಹಾರಗಳನ್ನು ಹುಡುಕಿ, ಮತ್ತಷ್ಟು ಹೊಸ ಹುರುಪು ಹಾಗೂ ಹೊಳಪಿನೊಂದಿಗೆ ನಡೆಯಲು ಬೇಕಾದ ವಾತಾವರಣದ ಸೃಷ್ಟಿಗೆ ಪ್ರಾಮಾಣಿಕವಾಗಿ ಪ್ರಯತ್ನಿಸುವೆ. ಸಿಎಂ ಅವರು ಕೂಡ ವಿವಿಯ ಸಮಸ್ಯೆಗಳನ್ನು ಸಹಾನುಭೂತಿಯಿಂದ ಪರಿಹರಿಸಬಲ್ಲರು ಎನ್ನುವ ನಂಬಿಕೆ ಇದೆ ಎಂದರು.

ಪದವಿ ಅಥವಾ ಶಿಕ್ಷಣ ನೀಡುವುದೇ ಕನ್ನಡ ವಿಶ್ವವಿದ್ಯಾಲಯ ಪರಮಗುರಿ ಅಲ್ಲ, ಕನ್ನಡ ಭಾಷೆಯ ಸರ್ವತೋಮುಖಿ ಏಳಿಗೆ ಸಾಧಿಸುವುದು ವಿವಿಯ ಮುಖ್ಯ ಉದ್ದೇಶ. ಇತಿಹಾಸ, ಸಮಾಜಶಾಸ್ತ್ರ, ಮಾನವಶಾಸ್ತ್ರ, ಜಾನಪದ, ಬುಡಕಟ್ಟು, ಲಲಿತಕಲೆ, ವಿಜ್ಞಾನ ಅಧ್ಯಯನಕ್ಕೂ ಭಾಷೆಗೂ ಕರುಳುಬಳ್ಳಿ ಸಂಬಂಧವಿದೆ. ಕನ್ನಡ ಭಾಷೆ, ಕಲೆ, ಸಂಸ್ಕೃತಿ, ಇತಿಹಾಸದ ಅಧ್ಯಯನವೆಂದರೆ, ಕನ್ನಡ ಜನತೆಯ ನೈತಿಕ ಮೌಲ್ಯ, ಆಧ್ಯಾತ್ಮಿಕ ಆಕಾಂಕ್ಷೆ, ಧಾರ್ಮಿಕ ಅಪೇಕ್ಷೆ, ಇನ್ನೂ ದಾಖಲಾಗದೆ ಉಳಿದ ಕನ್ನಡ ಮನುಷ್ಯರ ಚರಿತ್ರೆಗಳ ಪ್ರತಿಫಲವೇ ಆಗಿದೆ ಎಂದರು.

'ಆತ್ಮಸ್ಥೈರ್ಯ ಮೂಡಿಸುವ ಅಗತ್ಯವಿದೆ'



ವಿಜ್ಞಾನ ಮತ್ತು ತಂತ್ರಜ್ಞಾನದ ನಾಗಾಲೋಟದ ಪ್ರಭಾವಿಕೆಯ ನಡುವೆ ನಲುಗುತ್ತಿರುವ ಕನ್ನಡದ ದೇಸಿ ಪ್ರಜ್ಞೆಯನ್ನು ಅವುಗಳ ಜೊತೆಜೊತೆಯಲ್ಲಿಯೇ ಸಾಗುವ ಮತ್ತು ಉಳಿಯುವ ನಿಟ್ಟಿನಲ್ಲಿ ತೀವ್ರಗತಿಯಲ್ಲಿ ಕ್ರಮವಹಿಸಬೇಕಾಗಿದೆ. ಈ ನಿಟ್ಟಿನಲ್ಲಿ ಕನ್ನಡ ವಿವಿ ಅನೇಕ ಯೋಜನೆ ರೂಪಿಸಿಕೊಂಡು ಕಾರ್ಯಪ್ರವೃತ್ತವಾಗಿದೆ ಎಂದು ಕುಲಪತಿ ಡಾ.ಡಿ.ವಿ.ಪರಮಶಿವಮೂರ್ತಿ ಹೇಳಿದರು. ಸಂಸ್ಕೃತಿಯನ್ನು ಹೊರತುಪಡಿಸಿ ಯಾವುದೇ ಭಾಷೆ ಇರಲಾರದ ಕಾರಣ, ಕನ್ನಡ ದೇಶಿ ಸಂಸ್ಕೃತಿ ಶೋಧಿಸುವ, ಅದನ್ನು ಕಾಪಿಡುವ ನಿಟ್ಟಿನಲ್ಲಿ ವಿವಿಯು ನಿರಂತರವಾಗಿ ಯೋಚಿಸುತ್ತಾ ಬಂದಿದೆ. ಹಳತು ಮತ್ತು ಹೊಸದರ ಸಂಗಮವಾಗಬೇಕಿದೆ. ಹಲವು ರೀತಿಯ ಕನ್ನಡಗಳ ಸೊಗಡನ್ನು ಮುಂದಿನ ತಲೆಮಾರಿನವರೆಗೂ ಕಾಪಾಡುವ ಹೊಣೆಗಾರಿಕೆ ನಮ್ಮ ಮೇಲಿದೆ ಎಂದರು. ಕನ್ನಡ ಮಾಧ್ಯಮದಲ್ಲಿ ಅಧ್ಯಯನ ಮಾಡಿದ ವಿದ್ಯಾರ್ಥಿಗಳಲ್ಲಿ ತಮ್ಮ ಪ್ರತಿಭೆಯನ್ನು ಉನ್ನತ ಮಟ್ಟಕ್ಕೆ ಮುಟ್ಟಿಸುವ ಆತ್ಮಸ್ಥೈರ್ಯ ಮೂಡಿಸಬೇಕಾಗಿದೆ. ಶಿಕ್ಷಣ ಸಂಸ್ಥೆಗಳು, ಶಿಕ್ಷಣ ತಜ್ಞರು ಮತ್ತು ಸರಕಾರ ಒಟ್ಟಾಗಿ ಕುಳಿತು ಯೋಜನೆ ರೂಪಿಸಬೇಕಿದೆ ಎಂದು ಹೇಳಿದರು.

ವಿವಿಯು ಸುತ್ತಲಿನ ಐದು ಗ್ರಾಮಗಳನ್ನು ದತ್ತು ಪಡೆದು ಅವುಗಳಲ್ಲಿ ಆರೋಗ್ಯ, ಸ್ವಚ್ಛತೆ ಮತ್ತು ಶಿಕ್ಷಣದ ಮಹತ್ವದ ಬಗ್ಗೆ ಅರಿವು ಮೂಡಿಸುವ ಕೆಲಸ ಮಾಡುವ ಮೂಲಕ ಕನ್ನಡ ಕಟ್ಟುವ ಕ್ರಿಯೆಯಲ್ಲೂ ತೊಡಗಿಸಿಕೊಂಡಿದೆ ಎಂದರು.

**ಕನ್ನಡ ಪಸರಿಸುವ ಕೈಂಕರ್ಯಕ್ಕೆ ಬೆಂಬಲ ಅಗತ್ಯ:** ಇದೇ ವೇಳೆ ಮಾತನಾಡಿದ ಅನಂತಪುರಂನ ಆಂಧ್ರಪ್ರದೇಶ ಕೇಂದ್ರೀಯ ವಿಶ್ವವಿದ್ಯಾಲಯದ ಕುಲಪತಿ ಡಾ. ಎಸ್.ಎ.ಕೋರಿ, ಆಧುನಿಕ ತಂತ್ರಜ್ಞಾನ ವಿದ್ಯಾರ್ಥಿಗಳ ಕಲಿಕೆಗೆ ಪೂರಕವಾಗಿ ಬಳಕೆಯಾದಾಗ ಕನ್ನಡ ನೆಲದ ಬದುಕು ಹಸನಾಗಬಹುದು ಎಂದು ಅಭಿಪ್ರಾಯಪಟ್ಟರು. ಕನ್ನಡ ಭಾಷೆಗೆ ಪ್ರಾಮುಖ್ಯತೆ ನೀಡಿ ನಡೆಯುವ ಎಲ್ಲ ಕೆಲಸಗಳು ಕನ್ನಡ ನಾಡನ್ನು ಜಾಗತಿಕ ಮಟ್ಟದಲ್ಲಿ ಅನಾವರಣಗೊಳಿಸುವ ಬಹುಮುಖ್ಯ ಕೆಲಸವಾಗಲಿದೆ. ಉಚಿತವಾಗಿ ಜ್ಞಾನ ಪಸರಿಸುತ್ತಿರುವ ಸಾಮಾಜಿಕ ಜಾಲತಾಣಗಳು ಹಾಗೂ ವಿದ್ಯುನ್ಮಾನ ಮಾಧ್ಯಮಗಳ ಅಲೆಗೆ ರೋಮಾಂಚನಗೊಳ್ಳುತ್ತಿರುವ ಯುವ ಜನತೆ ವಿದ್ವತ್ತನ್ನು ಅರಗಿಸಿಕೊಂಡವರಂತೆ ವರ್ತಿಸುತ್ತಿದ್ದಾರೆ. ಇದು ಜ್ಞಾನದ ಮೇಲ್ನೋಟದ ಅರಿವು ಮಾತ್ರ. ಮಾಹಿತಿಗಳೇ ಸಂಶೋಧನೆಗಳಾಗಲಾರವು. ಆಳಕ್ಕೆ ಇಳಿದು ಜ್ಞಾನ ಶೋಧಿಸಿ ಅದರ ಸತ್ವ, ಸಂದೇಶವನ್ನು ಸಮಕಾಲೀನ ಸಮಾಜಕ್ಕೆ ಕೊಡಬೇಕಾದದ್ದು ಇಂದಿನ ತುರ್ತುಗಳಲ್ಲಿ ಒಂದು. ಜ್ಞಾನವನ್ನು ಕನ್ನಡದಲ್ಲಿ ಪಸರಿಸುವ ಈ ಕೈಂಕರ್ಯಕ್ಕೆ ಸಾರ್ವಜನಿಕರು, ಸರಕಾರಗಳು ಬೆಂಬಲಿಸಬೇಕಿದೆ ಎಂದರು.

ಡಿ.ಲಿಟ್ ಹಾಗೂ ಪಿಎಚ್ಡಿ ಪದವಿ ಪ್ರದಾನ

ಮಾನವೀಯ ಮೌಲ್ಯಗಳನ್ನು ಹುಡುಕುವ ಮತ್ತು ಆದರ್ಶ ಮೌಲ್ಯಗಳನ್ನು ಹುಟ್ಟುಹಾಕುವ ಬರಹಗಳನ್ನು ಪ್ರೋತ್ಸಾಹಿಸುವ ಕೆಲಸವೂ ಆಗಬೇಕಾಗಿದೆ. ಜಾಗತೀಕರಣ ಮತ್ತು ಉದಾರೀಕರಣಗಳ ಈ ಸಂದರ್ಭ ಕನ್ನಡ ವಿಶ್ವವಿದ್ಯಾಲಯದ ಪಾತ್ರ ಏನು ಎಂಬುದನ್ನು ನಾವು ಮತ್ತೆ ಮತ್ತೆ ವಿವೇಚಿಸಿಕೊಳ್ಳಬೇಕು. ನಿರ್ಲಕ್ಷ್ಯಕ್ಕೊಳಗಾಗುತ್ತಿರುವ ಕನ್ನಡ ಭಾಷೆ ಮತ್ತು ದೇಸಿ ಸಂಸ್ಕೃತಿ ಸಮೃದ್ಧಗೊಳಿಸುವ ಹಾಗೂ ಆಧುನಿಕ ಸವಾಲುಗಳಿಗೆ ಮುಖಾಮುಖಿಯಾಗಿಸುವ ನಿಟ್ಟಿನಲ್ಲಿ ಬೌದ್ಧಿಕವಾಗಿ ಅಣಿಯಾಗಬೇಕಾಗಿದೆ. ಈ ಹಿನ್ನೆಲೆಯಲ್ಲಿ ಕನ್ನಡ ವಿವಿ ಯೋಜನೆ ರೂಪಿಸುತ್ತಿದೆ. ರಾಜ್ಯದ ಗಡಿ ಪ್ರದೇಶಗಳ ಕನ್ನಡದ ವಿಭಿನ್ನ ಸಂಸ್ಕೃತಿಗಳ ಬಗೆಗೆ ಸಂಶೋಧನೆಗಳು ಇನ್ನೂ ಹೆಚ್ಚು ನಡೆಯಬೇಕಾಗಿದೆ ಎಂದು ಪ್ರತಿಪಾದಿಸಿದರು. ಯಾವುದೇ ತಜ್ಞತೆ ಇದ್ದರೂ ಆಧುನಿಕ ತಂತ್ರಜ್ಞಾನದ ತಿಳಿವಳಿಕೆ ಇಲ್ಲದಿದ್ದರೆ ಬದುಕು ಕಟ್ಟಿಕೊಳ್ಳುವುದು ಸಮಕಾಲೀನ ದಿನಗಳಲ್ಲಿ ಕಷ್ಟವಾಗಬಹುದು ಎಂದರು.

### ಹಬ್ಬದ ವಾತಾವರಣ

**ವಿಜಯನಗರ (ಹೊಸಪೇಟೆ):** ಕನ್ನಡ ವಿವಿ ನುಡಿಹಬ್ಬದ ನಿಮಿತ್ತ ವಿವಿಯಲ್ಲಿ ಹಬ್ಬದ ವಾತಾವರಣ ನಿರ್ಮಾಣವಾಗಿತ್ತು. ವಿವಿಯ ಪ್ರಮುಖ ಕಟ್ಟಡಗಳು ವಿದ್ಯುತ್ ದೀಪಾಲಂಕಾರದಿಂದ ಕಂಗೊಳಿಸುತ್ತಿದ್ದವು. ವಿವಿ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಅತಿ ಹೆಚ್ಚು 275 ವಿದ್ಯಾರ್ಥಿಗಳಿಗೆ ಪಿಎಚ್‌ಡಿ ಪದವಿ ನೀಡಿದ್ದು, ಸಮಾರಂಭವನ್ನು ಕಣ್ತುಂಬಿಕೊಳ್ಳಲು ಪದವಿ ಪಡೆದವರ ಕುಟುಂಬಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿದ್ದರು. ಸಾವಿರಕ್ಕೂ ಹೆಚ್ಚು ಜನರು ಆಗಮಿಸಿದ್ದರಿಂದ ಕೂರಲು ಆಸನಗಳು ಸಾಲದೆ ನಿಂತು ಕಾರ್ಯಕ್ರಮ ವೀಕ್ಷಿಸಿದರು. ವೇದಿಕೆ ಬಳಿ ಕುಡಿವ ನೀರು ಶೌಚಾಲಯದ ವ್ಯವಸ್ಥೆ ಇರಲಿಲ್ಲ. ವಿವಿಯ ಮೊದಲ ಗೇಟ್ ಪ್ರವೇಶದ್ವಾರದ ಎರಡೂ ಬದಿಯಲ್ಲಿ ಬಯಲುರಂಗ ಮಂದಿರದವರೆಗೆ ವಿದ್ಯುತ್ ದೀಪಾಲಂಕಾರ ಆಕರ್ಷಣೀಯವಾಗಿತ್ತು. ಸಂಜೆ 5.30ಕ್ಕೆ ಆರಂಭವಾಗಬೇಕಿದ್ದ ನುಡಿಹಬ್ಬ 6.30ಕ್ಕೆ ಆರಂಭವಾಯಿತು. ರಾಜ್ಯಪಾಲರ ಅನುಪಸ್ಥಿತಿಯಲ್ಲಿ ನಡೆದ ಘಟಿಕೋತ್ಸವದಲ್ಲಿ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ ಅವರು ಬರುವುದು ತಡವಾಗಿದ್ದರಿಂದ ಕಾರ್ಯಕ್ರಮ ತಡವಾಗಿ ಆರಂಭವಾಯಿತು. ಕಳೆದ ಎರಡು ವರ್ಷ ಸತತವಾಗಿ ನುಡಿಹಬ್ಬದಲ್ಲಿ ಪಾಲ್ಗೊಂಡಿದ್ದ ರಾಜ್ಯಪಾಲರ ಪ್ರವಾಸ ಈ ಬಾರಿಯೂ ನಿಗದಿಯಾಗಿತ್ತು. ಬರುವ ಮುಂಚಿನ ದಿನ ಕೋವಿಡ್ ದೃಢಪಟ್ಟಿದ್ದರಿಂದ ಪ್ರವಾಸ ರದ್ದಾಗಿತ್ತು.

Scanned with OKEN Scanner

ಸಂಯುಕ್ತ ಕರ್ನಾಟಕ

### ಮಾಹಿತಿ ಸಂಶೋಧನೆ ಆಗಲಾರದು | ಮಂಡಿಸುವ ಕೆಲಸ ಆಗಬೇಕಿದೆ

# ಪೂರಕ ಕಲಿಕೆಗೆ ಆಧುನಿಕ ತಂತ್ರಜ್ಞಾನ ಬಳಕೆಯಾಗಲಿ

**ಹೊಸಪೇಟೆ:** ಆಧುನಿಕ ಸಾಮಾಜಿಕ ಜಾಲತಾಣಗಳು ಹಾಗೂ ವಿದ್ಯುನ್ಮಾನ ಮಾಧ್ಯಮಗಳು ಉಚಿತವಾಗಿ ಜ್ಞಾನವನ್ನು ಪಸರಿಸುವ ಕೆಲಸ ಮಾಡುತ್ತಿವೆ. ಇವುಗಳ ಅಲೆಗೆ ನಮ್ಮ ಯುವ ಜನತೆ ರೋಮಾಂಚನಗೊಂಡು ವಿದ್ವತ್ತನ್ನು ಅರಗಿಸಿಕೊಂಡವರಂತೆ ವರ್ತಿಸುತ್ತಿದ್ದಾರೆ, ಇದು ಸರಿಯಲ್ಲ ಎಂದು ಆಂಧ್ರ ಪ್ರದೇಶದ ಅನಂತಪುರ ಕೇಂದ್ರೀಯ ವಿಶ್ವವಿದ್ಯಾಲಯದ ಕುಲಪತಿ ಡಾ. ಎಸ್.ಎ.ಕೋರಿ ಹೇಳಿದರು.

ಕನ್ನಡ ವಿಶ್ವವಿದ್ಯಾಲಯದ ನವರಂಗ ಬಯಲು ರಂಗಮಂದಿರದಲ್ಲಿ ಬುಧವಾರ 32 ನೇ ನುಡಿಹಬ್ಬ ಘಟಿಕೋತ್ಸವ ಭಾಷಣ ಮಾಡಿದ ಅವರು, ಆಧುನಿಕ ತಂತ್ರಜ್ಞಾನ ವಿದ್ಯಾರ್ಥಿಗಳ ಕಲಿಕೆಗೆ ಪೂರಕವಾಗಿ ಬಳಕೆಯಾದಾಗ ಮಾತ್ರ ಕನ್ನಡ ನೆಲದ ಬದುಕು ಹಸನಾಗಲಿದೆ. ಕನ್ನಡ ಭಾಷೆಗೆ ಪ್ರಾಮುಖ್ಯತೆ ನೀಡಿ ನಡೆಯುವ ಎಲ್ಲ ಕೆಲಸಗಳು ಕನ್ನಡ ನಾಡನ್ನು ಜಾಗತಿಕ ಮಟ್ಟದಲ್ಲಿ ಅನಾವರಣ ಗೊಳಿಸುವ ಬಹುಮುಖ್ಯ ಕೆಲಸವಾಗಲಿದೆ ಎಂದರು.

ಮಾಹಿತಿಗಳೇ ಸಂಶೋಧನೆಗಳಾಗಲಾರವು. ಆಕರಗಳ ಆಳಕ್ಕೆ ಇಳಿದು ಜ್ಞಾನವನ್ನು ಶೋಧಿಸಿ ಅದರ ಸತ್ವವನ್ನು, ಸಂದೇಶವನ್ನು ಸಮಕಾಲೀನ ಸಮಾಜಕ್ಕೆ ಕೊಡಬೇಕಾದದ್ದು ಇಂದಿನ ತುರ್ತುಗಳಲ್ಲಿ ಒಂದಾಗಿದೆ.ವಿಜ್ಞಾನ, ಕಲೆ, ಸಾಹಿತ್ಯ, ಸಂಸ್ಕೃತಿ, ಜನಪದ ಹೀಗೆ ಎಲ್ಲಾ ಕ್ಷೇತ್ರಗಳಲ್ಲಿ ಜ್ಞಾನವನ್ನು ಶೋಧಿಸಿ ಸಮಾಜಮುಖಿಯಾಗಿ ಮಂಡಿಸುವ ಕೆಲಸ ಆಗಬೇಕಾಗಿದೆ ಎಂದರು.

ಶೈಕ್ಷಣಿಕ ಕ್ಷೇತ್ರದ ಡಿಜಿಟಲೀಕರಣವು ಶಿಕ್ಷಣ ಕ್ಷೇತ್ರದಲ್ಲಿ ಹೊಸದೊಂದು ಜ್ಞಾನದ ಬಾಗಿಲನ್ನು ತೆರೆದಿಟ್ಟಿದೆ. ವಿದ್ಯಾರ್ಥಿಗಳು ತಮ್ಮ ಕಲಿಕೆಗೆ ಇವುಗಳನ್ನು ಪೂರಕವಾಗಿ ಬಳಸಿಕೊಂಡಲ್ಲಿ ಬದುಕಿನ ನೆಲೆಗಳನ್ನು ಕಂಡುಕೊಳ್ಳಬಹುದಾಗಿದೆ. ಆಧುನಿಕ ತಂತ್ರಜ್ಞಾನದ ಮೂಲಕ ಶಿಕ್ಷಣದಲ್ಲಿ ಕಲಿಕೆಯ ರೂಪ ಬದಲಾಗುತ್ತ ಸಾಗಿದೆ. ಈ ದಿಸೆಯಲ್ಲಿ ಆಧುನಿಕ ತಂತ್ರಜ್ಞಾನದಲ್ಲಿ ಪರಿಣತಿಯನ್ನು ಪಡೆದು ತಮ್ಮ ಕೌಶಲ್ಯವನ್ನು ಹೆಚ್ಚಿಸಿಕೊಳ್ಳುವುದು ಅನಿವಾರ್ಯವಾಗಿದೆ. ಆಧುನಿಕ ಜ್ಞಾನ, ವಿಜ್ಞಾನ ಕ್ಷೇತ್ರಗಳ ಸಾಧನೆಗಳನ್ನು ಅರಿತುಕೊಳ್ಳಬೇಕಾದ ಅಗತ್ಯ ಹಿಂದೆಂದಿಗಿಂತಲೂ ಇಂದು ಹೆಚ್ಚಾಗಿದೆ. ಅದಕ್ಕಾಗಿ ವಿದ್ಯಾರ್ಥಿಗಳು ಅನುವಾದ ಕೌಶಲ್ಯಗಳನ್ನು ಬೆಳೆಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.



ಹಂಪಿ ಕನ್ನಡ ವಿವಿಯ ನುಡಿಹಬ್ಬ, ಘಟಿಕೋತ್ಸವ ಸಮಾರಂಭದಲ್ಲಿ ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ.ಸುಧಾಕರ್ ಮಾತನಾಡಿದರು.

ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಮಾತನಾಡಿ, ಕನ್ನಡ ವಿಶ್ವವಿದ್ಯಾಲಯ ಎದುರಿಸುತ್ತಿರುವ ಆರ್ಥಿಕ ಬಿಕ್ಕಟ್ಟು ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯನವರ ಗಮನಕ್ಕೆ ತರಲಾಗುವುದು. ಆದಷ್ಟು ಬೇಗ ಪರಿಹಾರಗಳನ್ನು ಕಂಡುಕೊಂಡು ಕನ್ನಡ ವಿಶ್ವವಿದ್ಯಾಲಯದ ಶೈಕ್ಷಣಿಕ ಚಟುವಟಿಕೆಗಳು, ಅಭಿವೃದ್ಧಿ ಕಾರ್ಯಗಳು ಮತ್ತಷ್ಟು ಹೊಸ ಹುರುಪು ಹಾಗೂ ಹೊಳಪಿನೊಂದಿಗೆ ನಡೆಯಲು ಬೇಕಾದ ವಾತಾವರಣದ ಸೃಷ್ಟಿಗೆ ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು. ವಿಶ್ವವಿದ್ಯಾಲಯದ ಆರ್ಥಿಕ ಸಂಕಷ್ಟಗಳನ್ನು

ಶೈಕ್ಷಣಿಕ ಕ್ಷೇತ್ರದ ಡಿಜಿಟಲೀಕರಣವು ಶಿಕ್ಷಣ ಕ್ಷೇತ್ರದಲ್ಲಿ ಹೊಸದೊಂದು ಜ್ಞಾನದ ಬಾಗಿಲನ್ನು ತೆರೆದಿಟ್ಟಿದೆ. ವಿದ್ಯಾರ್ಥಿಗಳು ತಮ್ಮ ಕಲಿಕೆಗೆ ಇವುಗಳನ್ನು ಪೂರಕವಾಗಿ ಬಳಸಿಕೊಂಡಲ್ಲಿ ಬದುಕಿನ ನೆಲೆಗಳನ್ನು ಕಂಡುಕೊಳ್ಳಬಹುದಾಗಿದೆ. ಆಧುನಿಕ ತಂತ್ರಜ್ಞಾನದ ಮೂಲಕ ಶಿಕ್ಷಣದಲ್ಲಿ ಕಲಿಕೆಯ ರೂಪ ಬದಲಾಗುತ್ತ ಸಾಗಿದೆ.

ಮುಖ್ಯಮಂತ್ರಿಗಳು ಸಹಾನುಭೂತಿಯಿಂದ ಪರಿಹರಿಸಬಲ್ಲರು ಎಂಬ ನಂಬಿಕೆ ನನಗಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕನ್ನಡ ವಿವಿಯ ಕುಲಪತಿ ಡಾ.ಡಿ.ವಿ.ಪರಮಶಿವಮೂರ್ತಿ ಸ್ವಾಗತಿಸಿ ಮಾತನಾಡಿ, ಕನ್ನಡವು ಅನ್ನದ ಭಾಷೆಯಾಗಬೇಕೆಂಬ ಕೂಗು ಮತ್ತು ಒತ್ತಾಯಗಳು ಆಗಾಗ ಕಂಡುಬರುತ್ತಿವೆ. ವಿಜ್ಞಾನ, ತಂತ್ರಜ್ಞಾನ, ವೃತ್ತಿಪರ ಪದವಿಗಳ ಪಠ್ಯಗಳು ಕನ್ನಡ ಭಾಷೆಯಲ್ಲಿ ಪ್ರಕಟವಾಗಬೇಕಿದೆ. ಆ ಮೂಲಕ ವಿದ್ಯಾರ್ಥಿಗಳಲ್ಲಿ ಮಾತೃಭಾಷೆಯ ಮುಖಾಂತರ ಅರ್ಥೈಸಿಕೊಳ್ಳಬಹುದಾದ ಸೌಲಭ್ಯವನ್ನು ಒದಗಿಸಬೇಕಿದೆ. ಕನ್ನಡ ಮಾಧ್ಯಮದಲ್ಲಿ ಅಧ್ಯಯನ ಮಾಡಿದ ವಿದ್ಯಾರ್ಥಿಗಳಲ್ಲಿ ತಮ್ಮ ಪ್ರತಿಭೆಯನ್ನು ಉನ್ನತ ಮಟ್ಟಕ್ಕೆ ಮುಟ್ಟಿಸುವ ಆತ್ಮಸ್ಥೈರ್ಯವನ್ನು ಮೂಡಿಸಬೇಕಾಗಿದೆ. ಶಿಕ್ಷಣ ಸಂಸ್ಥೆಗಳು, ಶಿಕ್ಷಣ ತಜ್ಞರು ಮತ್ತು ಸರ್ಕಾರ ಒಟ್ಟಾಗಿ ಕುಳಿತು ಯೋಜನೆಗಳನ್ನು ರೂಪಿಸಬೇಕಿದೆ ಎಂದರು.

ಪ್ರತಿಷ್ಠಿತ ನಾಡೋಜ ಪ್ರಶಸ್ತಿಗೆ ಸ್ವೀಕರಿಸಿದ ಬಸವಲಿಂಗ ಪಟ್ಟದೇವರು, ಡಾ.ಟಿ.ವಿ.ಕಟ್ಟಿಮನಿ ಡಾ.ಎಸ್.ಸಿ.ಶರ್ಮ, ಜನಪ್ರತಿನಿಧಿಗಳು, ಅಧಿಕಾರಿಗಳು ಡಿ.ಲಿಟ್. ಹಾಗೂ ಪಿಎಚ್.ಡಿ. ಪದವಿಗಳನ್ನು ಪಡೆದ ಪದವೀಧರರು, ಅಧ್ಯಾಪಕರು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

Scanned with OKEN Scanner



# ಕನ್ನಡ ಘಟಿಕೋತ್ಸವದ ಮೆರವಣಿಗೆ

ಹೊಸಪೇಟೆ: ಕನ್ನಡ ವಿವಿಯ ಸಂಪ್ರದಾಯದಂತೆ ದೇಶಿ ಉಡುಗೆ ತೊಡಗಿಯಲ್ಲಿ ವಾದ್ಯ ನಾದದೊಂದಿಂಗೆ ಭವ್ಯ ಮೆರವಣಿಗೆ ಮೂಲಕ ಗಣ್ಯರನ್ನು ನವರಂಗ ಬಯಲು ಮಂದಿರ ವೇದಿಕೆಗೆ ಕರೆ ತರಲಾಯಿತು. ಸಮಾರಂಭದ ಮೊದಲು ಕಳಸ ಸ್ಥಾಪನೆ, ವಿವಿಯ ವಿದ್ಯಾರ್ಥಿಗಳಿಂದ ಪ್ರಾರ್ಥನೆ ನಡೆಯಿತು. ಸಮಾಕುಲಾಧಿಪತಿ ಹಾಗೂ ಉನ್ನತ ಶಿಕ್ಷಣ ಸಚಿವರಿಂದ ಘಟಿಕೋತ್ಸವ ಪ್ರಾರಂಭದ ಘೋಷಣೆ ಮಾಡಲಾಯಿತು. ಕಲಪತಿಗಳು ಗಣ್ಯರನ್ನು ಸ್ವಾಗತಿಸಿದರು. ಬಳಿಕ ಕಲಾಧಿಪತಿಗಳಿಂದ ಸಾಧಕರಿಗೆ ನಾಡೋಜ ಪದವಿ ಪ್ರದಾನ ಮಾಡಲಾಯಿತು. ಸಮಾರಂಭದಲ್ಲಿ ಒಬ್ಬರಿಗೆ ಡಿ.ಲಿಟ್

ಹಾಗೂ 275 ವಿದ್ಯಾರ್ಥಿಗಳಿಗೆ ಪಿಎಚ್‌ಡಿ ಪದವಿ ಪ್ರದಾನ ಮಾಡಲಾಯಿತು. ಕೊನೆಯಲ್ಲಿ ಕುಲಸಚಿವರು ವಂದಿಸಿದರು.

Scanned with OKEN Scanner



ಡಾ.ಬಸವಲಿಂಗ ಪಟ್ಟದ್ದೇವರು, ಪ್ರೊ.ತೇಜಸ್ವಿ ಕಟ್ಟಿಮನಿ, ಪ್ರೊ. ಎಸ್.ಸಿ.ಶರ್ಮಾರಿಗೆ ನಾಡೋಜ ಪದವಿ ಪ್ರದಾನ ಮಾಡಲಾಯಿತು.

# ಹಂಪಿ ಕನ್ನಡ ವಿವಿ 32ನೇ ನುಡಿಹಬ್ಬ ಮೂವರಿಗೆ ನಾಡೋಜ ಪ್ರದಾನ

**ಹೊಸಪೇಟೆ:** ಹಂಪಿ ಕನ್ನಡ ವಿಶ್ವವಿದ್ಯಾಲಯದ 32ನೇ ನುಡಿಹಬ್ಬ ಘಟಿಕೋತ್ಸವದ ಪ್ರಯುಕ್ತ ರಾಜ್ಯದ ಮೂವರು ಗಣ್ಯರಿಗೆ ನಾಡೋಜ ಗೌರವ ಪದವಿ ಮಾಡಲಾಯಿತು.

ಬಸವ ತತ್ವವನ್ನೇ ಬದುಕಿನ ಆದರ್ಶವನ್ನಾಗಿ ಮಾಡಿಕೊಂಡಿದ್ದ ಲಿಂ.ಡಾ. ಚನ್ನಬಸವ ಪಟ್ಟದ್ದೇವರ ಬಸವ ಸಂಸ್ಕೃತಿ ಪರಂಪರೆ ಮುಂದುವರಿಸಿಕೊಂಡು ಹೊರಟಿರುವ ಭಾಲ್ಕಿ ಹಿರೇಮಠದ ಡಾ.ಬಸವಲಿಂಗ ಪಟ್ಟದೇವರು, ಬಹುಭಾಷಾ ಕೋವಿದ, ಸಮರ್ಥ ಅನುವಾದಕ, ಪ್ರಸ್ತುತ ಆಂಧ್ರಪ್ರದೇಶದ ಸರ್ಕಾರಿ ಬುಡಕಟ್ಟು ವಿಶ್ವವಿದ್ಯಾಲಯದ ಕುಲಪತಿ ಡಾ.ತೇಜಸ್ವಿ ವಿ ಕಟ್ಟಿಮನಿ, ತುಮಕೂರು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಬೆಂಗಳೂರಿನ ಡಾ ಎಸ್.ಸಿ.ಶರ್ಮಾ ಅವರಿಗೆ ನಾಡೋಜ ಗೌರವ ಪ್ರದಾನ ಮಾಡಲಾಯಿತು.

ವಿದ್ಯಾರಣ್ಯದ 'ನವರಂಗ' ಬಯಲು ರಂಗಮಂದಿರದಲ್ಲಿ ಬುಧವಾರ ನಡೆದ ಹಂಪಿ ಕನ್ನಡ ವಿಶ್ವವಿದ್ಯಾಲಯದ 32ನೇ ನುಡಿಹಬ್ಬ ಘಟಿಕೋತ್ಸವ ಸಮಾರಂಭದಲ್ಲಿ ಉನ್ನತ ಶಿಕ್ಷಣ ಸಚಿವರು ಮತ್ತು ಹಂಪಿ ಕನ್ನಡ ವಿಶ್ವವಿದ್ಯಾಲಯದ ಸಮಕುಲಾಧಿಪತಿಗಳಾದ ಡಾ. ಎಂ.ಸಿ ಸುಧಾಕರ್ ಅವರು ನಾಡೋಜ ಗೌರವ ಪದವಿ ಪ್ರದಾನ ಮಾಡಿದರು.

ಹಂಪಿ ಕನ್ನಡ ವಿಶ್ವವಿದ್ಯಾಲಯವು ರಾಷ್ಟ್ರ ಕವಿ ಕುವೆಂಪು, ಸಿದ್ದವನಹಳ್ಳಿ ನಿಜಲಿಂಗಪ್ಪ, ಗಂಗೂಬಾಯಿ ಹಾನಗಲ್, ಡಾ. ಪಾಟೀಲ ಪುಟ್ಟಪ್ಪ ಸೇರಿದಂತೆ ಇಲ್ಲಿಯವರೆಗೆ 95 ಗಣ್ಯರಿಗೆ ನಾಡೋಜ ಗೌರವ ಪದವಿ ನೀಡಿದೆ. ಪ್ರೊ.ಎಫ್.ಟಿ.ಹಳ್ಳಿಕೇರಿ, ಡಾ.ಚೆಲುವರಾಜು, ಡಾ.ಶಿವಾನಂದ ವಿರಕ್ತಮಠ ಅವರು ನಾಡೋಜ ಪುರಸ್ಕೃತ ಮಹನೀಯರ ಪರಿಚಯ ಮಾಡಿದರು.

Scanned with OKEN Scanner

ನಂ 1 ವಿಜಯವಾಣಿ
VIJAYAVANI » GANGAVATI

## ಕುಲಪತಿ ಡಾ.ಎಸ್.ಎ.ಕೋರಿ ಸಲಹೆ | ಕನ್ನಡ ವಿವಿ 32ನೇ ನುಡಿಹಬ್ಬ

# ಅನುವಾದ ಕೌಶಲ ಬೆಳೆಸಿಕೊಳ್ಳಲಿ

■ ವಿಜಯವಾಣಿ ಸುದ್ದಿಜಾಲ ಹೊಸಪೇಟೆ

ಆಧುನಿಕತೆಯ ನಾಗಾಲೋಟದಲ್ಲಿ ತೃತೀಯ ಜಗತ್ತಿನ ಅನೇಕ ಭಾಷೆಗಳು ಮತ್ತು ಸಂಸ್ಕೃತಿ ಆತಂಕದ ಸ್ಥಿತಿಯನ್ನು ಎದುರಿಸುತ್ತಿರುವ ಈ ಸಂದರ್ಭದಲ್ಲಿ ಕನ್ನಡ ವಿವಿಯ ಜವಾಬ್ದಾರಿ ಅತ್ಯಂತ ಹೆಚ್ಚಿನದಾಗಿದೆ ಎಂದು ಅನಂತಪುರಂನ ಆಂಧ್ರಪ್ರದೇಶ ಕೇಂದ್ರೀಯ ವಿಶ್ವವಿದ್ಯಾಲಯದ ಕುಲಪತಿ ಡಾ.ಎಸ್.ಎ.ಕೋರಿ ಹೇಳಿದರು.


ಡಾ.ಎಸ್.ಎ.ಕೋರಿ

» ಮೂರು ನಾಡೋಜ, ಒಂದು ಡಿಲಿಟ್, 264 ಪಿಎಚ್.ಡಿ ಪ್ರದಾನ

ಕನ್ನಡ ವಿವಿಯ ನವರಂಗ ಬಯಲು ರಂಗಮಂದಿರದಲ್ಲಿ ಬುಧವಾರ ಸಂಜೆ ಆಯೋಜಿಸಿದ್ದ 32ನೇ ನುಡಿಹಬ್ಬದಲ್ಲಿ ಮಾತನಾಡಿದರು. ಸಾಮಾಜಿಕ ಜಾಲತಾಣಗಳು ಹಾಗೂ ವಿದ್ಯುನ್ಮಾನ ಮಾಧ್ಯಮಗಳು ಉಚಿತವಾಗಿ ಜ್ಞಾನವನ್ನು ಪಸರಿಸುವ ಕೆಲಸ ಮಾಡುತ್ತಿವೆ. ಇವುಗಳ ಅಲೆಗೆ ನಮ್ಮ ಯುವ ಜನತೆ ರೋಮಾಂಚನಗೊಂಡು ವಿದ್ವತ್ತನ್ನು ಅರಗಿಸಿಕೊಂಡವರಂತೆ ವರ್ತಿಸುತ್ತಿದ್ದಾರೆ. ಮಾಹಿತಿಗಳೇ ಸಂಶೋಧನೆಗಳಾಗಲಾರವು. ಆಕರಗಳ ಆಳಕ್ಕೆ ಇಳಿದು ಜ್ಞಾನವನ್ನು ಶೋಧಿಸಿ ಅದರ ಸತ್ವ-ಸಂದೇಶವನ್ನು ಸಮಕಾಲೀನ ಸಮಾಜಕ್ಕೆ ಕೊಡಬೇಕಾದದ್ದು ಇಂದಿನ ತುರ್ತುಗಳಲ್ಲಿ ಒಂದಾಗಿದೆ. ವಿಜ್ಞಾನ, ಕಲೆ, ಸಾಹಿತ್ಯ, ಸಂಸ್ಕೃತಿ, ಜನಪದ ಹೀಗೆ ಎಲ್ಲ ಕ್ಷೇತ್ರಗಳಲ್ಲಿ ಜ್ಞಾನವನ್ನು ಶೋಧಿಸಿ ಸಮಾಜಮುಖಿಯಾಗಿ ಮಂಡಿಸುವ ಕೆಲಸ ಆಗಬೇಕಾಗಿದೆ ಎಂದರು.

ಶೈಕ್ಷಣಿಕ ಕ್ಷೇತ್ರದ ಡಿಜಿಟಲೀಕರಣವು ಶಿಕ್ಷಣ ಕ್ಷೇತ್ರದಲ್ಲಿ ಹೊಸದೊಂದು ಜ್ಞಾನದ ಬಾಗಿಲನ್ನು ತೆರೆದಿಟ್ಟಿದೆ. ವಿದ್ಯಾರ್ಥಿಗಳು ತಮ್ಮ ಕಲಿಕೆಗೆ ಇವುಗಳನ್ನು ಪೂರಕವಾಗಿ ಬಳಸಿಕೊಂಡಲ್ಲಿ ಬದುಕಿನ ನೆಲೆಗಳನ್ನು ಕಂಡುಕೊಳ್ಳಬಹುದಾಗಿದೆ. ಆಧುನಿಕ ತಂತ್ರಜ್ಞಾನದ ಮೂಲಕ ಶಿಕ್ಷಣದಲ್ಲಿ ಕಲಿಕೆಯ ರೂಪ ಬದಲಾಗುತ್ತ ಸಾಗಿದೆ. ಈ ದಿಸೆಯಲ್ಲಿ ಆಧುನಿಕ ತಂತ್ರಜ್ಞಾನದಲ್ಲಿ ಪರಿಣತಿಯನ್ನು ಪಡೆದು ತಮ್ಮ ಕೌಶಲವನ್ನು ಹೆಚ್ಚಿಸಿಕೊಳ್ಳುವುದು ಅನಿವಾರ್ಯವಾಗಿದೆ. ಆಧುನಿಕ ಜ್ಞಾನ, ವಿಜ್ಞಾನ ಕ್ಷೇತ್ರಗಳ ಸಾಧನೆಗಳನ್ನು ಅರಿತುಕೊಳ್ಳಬೇಕಾದ ಅಗತ್ಯ ಹಿಂದೆಂದಿಗಿಂತಲೂ ಇಂದು ಹೆಚ್ಚಾಗಿದೆ. ಅದಕ್ಕಾಗಿ ವಿದ್ಯಾರ್ಥಿಗಳು ಅನುವಾದ ಕೌಶಲಗಳನ್ನು ಬೆಳೆಸಿಕೊಳ್ಳಬೇಕು ಎಂದರು. ಕನ್ನಡ ವಿವಿಯ ಕುಲಪತಿ ಡಾ.ಡಿ.ವಿ.ಪರಮಶಿವಮೂರ್ತಿ ಮಾತನಾಡಿ, ಕನ್ನಡವು ಅನ್ನದ ಭಾಷೆಯಾಗಬೇಕೆಂಬ ಕೂಗು ಮತ್ತು ಒತ್ತಾಯಗಳು ಆಗಾಗ ಕಂಡುಬರುತ್ತಿವೆ. ವಿಜ್ಞಾನ, ತಂತ್ರಜ್ಞಾನ, ವೃತ್ತಿಪರ ಪದವಿಗಳ ಪಠ್ಯಗಳು ಕನ್ನಡ ಭಾಷೆಯಲ್ಲಿ ಪ್ರಕಟವಾಗಬೇಕಿದೆ. ಆ ಮೂಲಕ ವಿದ್ಯಾರ್ಥಿಗಳಲ್ಲಿ ಮಾತೃಭಾಷೆಯ ಮುಖಾಂತರ ಅರ್ಥೈಸಿಕೊಳ್ಳಬಹುದಾದ ಸೌಲಭ್ಯವನ್ನು ಒದಗಿಸಬೇಕಿದೆ. ಕನ್ನಡ ಮಾಧ್ಯಮದಲ್ಲಿ ಅಧ್ಯಯನ ಮಾಡಿದ ವಿದ್ಯಾರ್ಥಿಗಳಲ್ಲಿ ತಮ್ಮ ಪ್ರತಿಭೆಯನ್ನು ಉನ್ನತ ಮಟ್ಟಕ್ಕೆ ಮುಟ್ಟಿಸುವ ಆತ್ಮಸ್ಥೈರ್ಯವನ್ನು ಮೂಡಿಸಬೇಕಾಗಿದೆ. ಶಿಕ್ಷಣ ಸಂಸ್ಥೆಗಳು, ಶಿಕ್ಷಣ ತಜ್ಞರು ಮತ್ತು ಸರ್ಕಾರ ಒಟ್ಟಾಗಿ ಕುಳಿತು ಯೋಜನೆಗಳನ್ನು ರೂಪಿಸಬೇಕಿದೆ ಎಂದರು.

ವಿಜಯವಾಣಿ ಚಿತ್ರ


ಕನ್ನಡ ವಿವಿಯ ನವರಂಗ ಬಯಲು ರಂಗಮಂದಿರದಲ್ಲಿ ಆಯೋಜಿಸಿದ್ದ 32ನೇ ನುಡಿಹಬ್ಬದಲ್ಲಿ ಪಿಎಚ್.ಡಿ ಪದವಿ ಪಡೆದ ವಿದ್ಯಾರ್ಥಿಗಳು ಪ್ರತಿಜ್ಞಾ ವಿಧಿ ಸ್ವೀಕರಿಸಿದರು.



## ಸಮುದಾಯದಲ್ಲೇ ಮೊದಲ ಪಿಎಚ್.ಡಿ

ಕನ್ನಡ ವಿವಿಯ 32ನೇ ನುಡಿಹಬ್ಬದಲ್ಲಿ ಕೇರಳ ಹಾಗೂ ತಮಿಳುನಾಡಿನ ಗಡಿಯಲ್ಲಿರುವ ಮೈಸೂರು ಜಿಲ್ಲೆಯ ಹೆಗ್ಗಡದೇವನಕೋಟೆ ತಾಲೂಕಿನ ಅಂತರಸಂತೆ ಹೋಬಳಿಯ ಡಿಬಿ ಕುಪ್ಪೆ ಗ್ರಾಪಂನ ಸೇಬಿನಕೊಲ್ಲೆಹಾಳು ಹಾಡಿಯ ಅತಿ ಕಡಿಮೆ ಜನಸಂಖ್ಯೆ ಇರುವ ಪಣಿಯನ್ ಬುಡಕಟ್ಟು ಸಮುದಾಯದ ದಿವ್ಯಾ ಎಸ್.ಆರ್. ತಮ್ಮ ಸಮುದಾಯದ ಸಂಶೋಧನೆ ಕುರಿತು ಪ್ರಬಂಧ ಮಂಡಿಸಿ ಪಿಎಚ್.ಡಿ ಪದವಿ ಪಡೆದು ಮೊದಲ ಮಹಿಳೆಯಾಗಿದ್ದಾರೆ.

## ಹೊಸ ಹುರುಪು, ಹೊಳಪಿನ ವಾತಾವರಣ ಸೃಷ್ಟಿ


ಡಾ.ಎಂ.ಸಿ.ಸುಧಾಕರ್

ಕನ್ನಡ ವಿವಿ ನಾಡು-ನುಡಿ, ನೆಲ-ಜಲ, ಇತಿಹಾಸ ಹಾಗೂ ಪರಂಪರೆಗಳ ಸಂಶೋಧನೆ ಹಾಗೂ ಅಧ್ಯಯನ ಮಾಡಲು ಹುಟ್ಟಿದ್ದೇ ನಮ್ಮೆಲ್ಲರ ಹೆಮ್ಮೆಯಾಗಿದೆ ಎಂದು ಸಮಕುಲಾಧಿಪತಿ ಹಾಗೂ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಹೇಳಿದರು. ಕನ್ನಡ ವಿವಿ ಆವರಣದಲ್ಲಿ 32ನೇ ನುಡಿಹಬ್ಬದಲ್ಲಿ ನಾಡೋಜ, ಡಿ.ಲಿಟ್, ಪಿಎಚ್.ಡಿ ಪದವಿ ಪ್ರದಾನ ಮಾಡಿ ಮಾತನಾಡಿ, ವಿವಿಯ ಧ್ಯೇಯವಾಕ್ಯವೇ, ಕನ್ನಡ ವಿಶ್ವವಿದ್ಯಾಲಯ ವಿದ್ಯೆಯನ್ನು ಕಲಿಯಲು ಅನುವು ಮಾಡಿಕೊಡುವ ಒಂದು ಸಂಸ್ಥೆಯೇ ಹೊರತು, ಅದು ವಿದ್ಯೆಯನ್ನು ಕಲಿಸುವ ಸಂಸ್ಥೆಯಲ್ಲ. ಒಂದು ದೃಷ್ಟಿಯಿಂದ ಇದು ವಿದ್ಯೆಯನ್ನು ನಿರ್ಮಿಸುವ ಸಂಸ್ಥೆಯಾಗಿದೆ. ಆದ್ದರಿಂದ ಕನ್ನಡ ವಿವಿ ಕನ್ನಡಿಗರೆಲ್ಲರ ಕನಸು ಮತ್ತು ಜವಾಬ್ದಾರಿಗಳಿಂದ ಬೆಳೆಯಬೇಕು. ವಿವಿ ಕೆಲವರು ಬರೆದು ಮುಗಿಸಬೇಕಾದ ಪುಸ್ತಕವಲ್ಲ, ಕನ್ನಡದ ಸಮಸ್ತದೈವ ಬರೆಯಬೇಕಾದ ಪುಸ್ತಕವಿದು ಎಂದರು. ನಾಡಿನ ಹೆಮ್ಮೆಯ ವಿವಿಗೆ ಅನುದಾನದ ಕೊರತೆಯಿಂದ ತನ್ನ ಸಂಶೋಧನೆ ಅಭಿವೃದ್ಧಿ ಹಾಗೂ ನಿರ್ವಹಣೆ ಚಟುವಟಿಕೆಗಳಲ್ಲಿ ಸಂಕಷ್ಟ ಎದುರಾಗಿದೆ ಎಂದು ಕೇಳಿದ್ದೇನೆ. ಕುಲಪತಿ ಡಾ.ಡಿ.ವಿ.ಪರಮಶಿವಮೂರ್ತಿ ಆರ್ಥಿಕ ಸಂಕಷ್ಟಗಳಿಂದಾಗಿ ಉದ್ಭವಿಸಿರುವ ಇಲ್ಲಿನ ಸಮಸ್ಯೆಗಳನ್ನು ಹಂಚಿಕೊಂಡಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಜತೆ ಮಾತನಾಡಿ, ಆದಷ್ಟು ಬೇಗ ಪರಿಹಾರ ಹುಡುಕಿ, ಮತ್ತಷ್ಟು ಹೊಸ ಹುರುಪು ಹಾಗೂ ಹೊಳಪಿನೊಂದಿಗೆ ನಡೆಯಲು ಬೇಕಾದ ವಾತಾವರಣದ ಸೃಷ್ಟಿಗೆ ಪ್ರಾಮಾಣಿಕವಾಗಿ ಪ್ರಯತ್ನಿಸುವೆ ಎಂದರು.

Scanned with OKEN Scanner

### ನುಡಿಹಬ್ಬದಲ್ಲಿ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಭರವಸೆ

# ಕನ್ನಡ ವಿಶ್ವವಿದ್ಯಾಲಯಕ್ಕೆ ಅನುದಾನ ನಿಶ್ಚಿತ

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ಕನ್ನಡ ವಿಶ್ವವಿದ್ಯಾಲಯದ ಆರ್ಥಿಕ ಸಂಕಷ್ಟಗಳಿಗೆ ಆದಷ್ಟು ಬೇಗ ಪರಿಹಾರಗಳನ್ನು ಹುಡುಕಿ, ಶೈಕ್ಷಣಿಕ ಚಟುವಟಿಕೆಗಳು, ಅಭಿವೃದ್ಧಿ ಕಾರ್ಯಗಳು ಮತ್ತಷ್ಟು ಹೊಸ ಹುರುಪು ಹಾಗೂ ಹೊಳಪಿನೊಂದಿಗೆ ನಡೆಯಲು ಬೇಕಾದ ವಾತಾವರಣದ ಸೃಷ್ಟಿಗೆ ಪ್ರಾಮಾಣಿಕವಾಗಿ ಪ್ರಯತ್ನಿಸುವುದಾಗಿ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಹೇಳಿದರು.

ಹಂಪಿ ಕನ್ನಡ ವಿಶ್ವವಿದ್ಯಾಲಯದ 32ನೇ ನುಡಿಹಬ್ಬದಲ್ಲಿ ಡಿ.ಲಿಟ್ ಮತ್ತು ಪಿಎಚ್‌.ಡಿ ಪದವಿ ಪ್ರದಾನ ಮಾಡಿ ಮಾತನಾಡಿದ ಅವರು, ಸ್ವತಃ ಮುಖ್ಯಮಂತ್ರಿಗಳು ಇತ್ತೀಚೆಗೆ ಕರ್ನಾಟಕದಲ್ಲಿ ಶೇ 60ರಷ್ಟು ವಾಣಿಜ್ಯ ಫಲಕಗಳು ಕನ್ನಡದಲ್ಲಿರಬೇಕು ಎನ್ನುವ ತೀವ್ರ ಕಳಕಳಿ ವ್ಯಕ್ತಪಡಿಸಿದ್ದಾರೆ. ಹಾಗಾಗಿ ಕನ್ನಡ ವಿಶ್ವವಿದ್ಯಾಲಯದ ಆರ್ಥಿಕ ಸಂಕಷ್ಟಗಳನ್ನು ಸಹ ಸಹಾನುಭೂತಿಯಿಂದ ಪರಿಹರಿಸುತ್ತಾರೆ ಎಂಬ ವಿಶ್ವಾಸ ಇದೆ ಎಂದರು.

‘ವಿಶ್ವವಿದ್ಯಾಲಯ ಕೇವಲ ಅಧಿಕಾರ ಕೇಂದ್ರವಾಗಬಾರದು, ಬದಲಾಗಿ ಅಧ್ಯಯನ ಕೇಂದ್ರವಾಗಿರಬೇಕು ಎನ್ನುವ ಸಮಷ್ಟಿ ಪ್ರಜ್ಞೆಯನ್ನು ಕನ್ನಡ ವಿಶ್ವವಿದ್ಯಾಲಯದಲ್ಲಿ ಕಾಣಬಹುದು. ಪದವಿ ಅಥವಾ ಶಿಕ್ಷಣ ನೀಡುವುದೇ ಕನ್ನಡ ವಿಶ್ವವಿದ್ಯಾಲಯ ಪರಮಗುರಿ ಅಲ್ಲ, ಕನ್ನಡ ಭಾಷೆಯ ಸರ್ವತೋಮುಖ ಏಳಿಗೆಯನ್ನು ಸಾಧಿಸುವುದು ವಿಶ್ವವಿದ್ಯಾಲಯದ ಮುಖ್ಯ ಉದ್ದೇಶ. ಈ ಗುರಿ ಸಾಧನೆಗಾಗಿ ಸಂಶೋಧನಾಂಗ, ಪ್ರಸಾರಾಂಗ, ಆಡಳಿತಾಂಗ ಎಂಬ

**ಮುಖ್ಯಾಂಶಗಳು**

- ವಿವಿಯಲ್ಲಿ ಹೊಸ ಹುರುಪು ತರುವ ಭರವಸೆ
- ವಿವಿ ಅಧ್ಯಯನ ಹಾಗೂ ಸಂಶೋಧನೆ ನಡೆಸಲಿ
- ಸಾಧನೆಗಳ ಮೆಟ್ಟಲು ಏರಿದ ವಿವಿಗೆ ಅನುದಾನ ಕೊರತೆ

ಸಂರಚನೆಯನ್ನು ಮಾಡಿಕೊಂಡು ಹಲವು ಎತ್ತರಗಳನ್ನು ವಿಶ್ವವಿದ್ಯಾಲಯ ಏರಿದೆ. ಇಂತಹ ಅಮೋಘ ಸಾಧನೆ ಮಾಡಿದ ಹೆಮ್ಮೆಯ ವಿಶ್ವವಿದ್ಯಾಲಯವು ಅನುದಾನದ ಕೊರತೆಯಿಂದ ತನ್ನ ಸಂಶೋಧನೆ, ಅಭಿವೃದ್ಧಿ ಹಾಗೂ ನಿರ್ವಹಣೆ ಚಟುವಟಿಕೆಗಳಲ್ಲಿ ಸಂಕಷ್ಟಗಳನ್ನು ಎದುರಿಸುತ್ತಿರುವುದು ಸರಿಯಲ್ಲ’ ಎಂದರು.

‘ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ ಇತಿಹಾಸದ ಅಧ್ಯಯನವೆಂದರೆ, ಇಲ್ಲಿ ವಾಸಿಸುವ ಮನುಷ್ಯರ ಅಧ್ಯಯನವೇ ಆಗಿದೆ. ಇತಿಹಾಸ, ಸಮಾಜಶಾಸ್ತ್ರ, ಮಾನವಶಾಸ್ತ್ರ, ಜಾನಪದ, ಬುಡಕಟ್ಟು, ಲಲಿತಕಲೆಗಳು, ವಿಜ್ಞಾನಗಳ ಅಧ್ಯಯನಕ್ಕೂ ಭಾಷೆಗೂ ಕರುಳಬಳ್ಳಿ ಸಂಬಂಧವಿದೆ. ಕನ್ನಡ ಭಾಷೆ, ಕಲೆ, ಸಂಸ್ಕೃತಿ, ಇತಿಹಾಸದ ಅಧ್ಯಯನವೆಂದರೆ, ಕನ್ನಡ ಜನತೆಯ ನೈತಿಕಮೌಲ್ಯಗಳ, ಆಧ್ಯಾತ್ಮಿಕ ಆಕಾಂಕ್ಷೆಗಳ, ಧಾರ್ಮಿಕ ಅಪೇಕ್ಷೆಗಳ, ಇನ್ನು ದಾಖಲಾಗದೆ ಉಳಿದ ಕನ್ನಡ ಮನುಷ್ಯರ ಚರಿತ್ರೆ ಇವೆಲ್ಲವುಗಳ ಪ್ರತಿಫಲವೇ ಆಗಿದೆ’ ಎಂದು ಸಚಿವರು ಹೇಳಿದರು.

**ನಾಡೋಜ ಗೌರವ:** ಕುಲಾಧಿಪತಿ ಥಾವರ್ ಚಂದ್ ಗೆಹಲೋತ್ ಅವರ ಅನುಪಸ್ಥಿತಿಯಲ್ಲಿ ಸಮಕುಲಾಧಿಪತಿಯೂ ಆಗಿರುವ ಉನ್ನತ ಶಿಕ್ಷಣ ಸಚಿವರೇ ಘಟಿಕೋತ್ಸವಕ್ಕೆ ಚಾಲನೆ ಕೊಟ್ಟರು ಹಾಗೂ ನಾಡೋಜ ಗೌರವ ಪದವಿ ಪ್ರದಾನ ಮಾಡಿದರು. ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ, ಸಮಾಜ, ಕಲೆಯ ಕ್ಷೇತ್ರಗಳಲ್ಲಿ ವಿಶೇಷ ಸೇವೆ ಸಲ್ಲಿಸಿರುವ ಬೀದರ್ ಜಿಲ್ಲೆ ಭಾಲ್ಕಿ ಹಿರೇಮಠ ಸಂಸ್ಥಾನದ ಬಸವಲಿಂಗ ಪಟ್ಟದ್ದೇವರು, ಆಂಧ್ರಪ್ರದೇಶ ವಿಜಯನಗರದ ಕೇಂದ್ರೀಯ ಬುಡಕಟ್ಟು ವಿಶ್ವವಿದ್ಯಾಲಯ ಕುಲಪತಿ ಪ್ರೊ. ಟಿ.ವಿ. ಕಟ್ಟೀಮನಿ ಹಾಗೂ ತುಮಕೂರು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ.ಎಸ್‌.ಸಿ.ಶರ್ಮಾ ಅವರಿಗೆ ನಾಡೋಜ ಗೌರವ ಪದವಿ ನೀಡಿ ಸನ್ಮಾನಿಸಲಾಯಿತು.

ಸ್ವಾಗತ ಭಾಷಣ ಮಾಡಿದ ಕುಲಪತಿ ಪ್ರೊ. ಡಿ. ವಿ. ಪರಮಶಿವಮೂರ್ತಿ ಅವರು ವಿಶ್ವವಿದ್ಯಾಲಯದ ಗುರಿ ಮತ್ತು ಸಾಧನೆಗಳ ಬಗ್ಗೆ ವಿವರವಾದ ಮಾಹಿತಿ ನೀಡಿದರು.

ಸಂಶೋಧನೆಗಾಗಿಯೇ ಸ್ಥಾಪಿತವಾದ ದೇಶದ ಏಕೈಕ ವಿಶ್ವವಿದ್ಯಾಲಯ ಎಂಬ ಹೆಗ್ಗಳಿಕೆಯ ಕನ್ನಡ ವಿಶ್ವವಿದ್ಯಾಲಯದಲ್ಲಿ ಕನ್ನಡ ನಾಡು-ನುಡಿ, ಚರಿತ್ರೆ-ಸಂಸ್ಕೃತಿಯ ಅಧ್ಯಯನ ಮತ್ತು ಸಂಶೋಧನೆಗಳನ್ನು ನಿರಂತರವಾಗಿ ನಡೆಸುತ್ತ ಬಂದಿದೆ. ಸಂಸ್ಕೃತಿಯನ್ನು ಹೊರತುಪಡಿಸಿ ಯಾವುದೇ ಭಾಷೆ ಇರಲಾರದ ಕಾರಣ, ಕನ್ನಡ ದೇಶಿ ಸಂಸ್ಕೃತಿಯನ್ನು ಶೋಧಿಸುವ, ಅದನ್ನು ಕಾಪಿಡುವ ನಿಟ್ಟಿನಲ್ಲಿ ವಿಶ್ವವಿದ್ಯಾಲಯವು ನಿರಂತರವಾಗಿ ಯೋಚಿಸುತ್ತ ಬಂದಿದೆ ಎಂದರು.

ವಿಜ್ಞಾನ ಮತ್ತು ತಂತ್ರಜ್ಞಾನದ ನಾಗಾಲೋಟದ ಪ್ರಭಾವಿಕೆಯ ನಡುವೆ ನಲುಗುತ್ತಿರುವ ಕನ್ನಡದ ದೇಸಿ ಪ್ರಜ್ಞೆಯನ್ನು ಅವುಗಳ ಜೊತೆಜೊತೆಯಲ್ಲಿಯೇ ಸಾಗುವ ಮತ್ತು ಉಳಿಯುವ ನಿಟ್ಟಿನಲ್ಲಿ ತೀವ್ರಗತಿಯಲ್ಲಿ ಕ್ರಮವಹಿಸಬೇಕಿದ್ದು, ಈ ನಿಟ್ಟಿನಲ್ಲಿ ಕನ್ನಡ ವಿಶ್ವವಿದ್ಯಾಲಯ ಅನೇಕ ಕಾರ್ಯ ಯೋಜನೆಗಳನ್ನು ರೂಪಿಸಿಕೊಂಡಿದೆ. ಹಲವು ರೀತಿಯ ಕನ್ನಡಗಳ ಸೊಗಡನ್ನು ಮುಂದಿನ ತಲೆಮಾರಿಗೂ ಕಾಪಾಡುವ ಹೊಣೆಗಾರಿಕೆ ನಮ್ಮ ಮೇಲಿದೆ ಎಂದರು.

ವಿಶ್ವವಿದ್ಯಾಲಯ ಎದುರಿಸುತ್ತಿರುವ ಆರ್ಥಿಕ ಸಂಕಷ್ಟವನ್ನು ಸೂಚ್ಯವಾಗಿಯೇ ಮನವರಿಕೆ ಮಾಡಿದ ಅವರು, ಹಲವು ಅಭಿವೃದ್ಧಿ ಕೆಲಸಗಳು ಅನುದಾನಕ್ಕಾಗಿ ಕಾಯುತ್ತಿರುವುದಾಗಿ ತಿಳಿಸಿದರು.



ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಬುಧವಾರ ನಡೆದ ಘಟಿಕೋತ್ಸವದಲ್ಲಿ ಕಾಣಿಸಿಕೊಂಡ 275 ಪಿಎಚ್‌.ಡಿ ಪದವೀಧರರು

## ‘ನುಡಿಹಬ್ಬ ಜಾತ್ರೆ’

ನವರಂಗ ಬಯಲು ರಂಗಮಂಟಪದಲ್ಲಿ ಸುಮಾರು 350 ಮಂದಿಗಷ್ಟೇ ಕುಳಿತುಕೊಳ್ಳಲು ಅವಕಾಶ ಇದೆ. 275 ಮಂದಿ ಪಿಎಚ್‌.ಡಿ.ಪದವಿ ಪಡೆದ ಅಭ್ಯರ್ಥಿಗಳೇ ಇದ್ದರೆ, ಅವರು ಪದವಿ ಪಡೆಯುವುದನ್ನು ಕಣ್ತುಂಬಿಕೊಳ್ಳಲು ಅವರ ಕುಟುಂಬದವರು, ಬಂಧು ಮಿತ್ರರು ಬಂದಿದ್ದರು. ಹೀಗಾಗಿ ಅದೊಂದು ‘ನುಡಿಹಬ್ಬ ಜಾತ್ರೆ’ಯೇ ಆಗಿಬಿಟ್ಟಿತು. ಮುಂದಿನ ವರ್ಷ ಪಿಎಚ್‌.ಡಿ ಪದವಿ ಪಡೆಯುವವರ ಸಂಖ್ಯೆ 300ಕ್ಕಿಂತ ಅಧಿಕ ಇದ್ದರೆ ನುಡಿಹಬ್ಬವನ್ನು ದೊಡ್ಡ ಜಾಗದಲ್ಲಿ ನಡೆಸಬೇಕೇನೋ ಎಂಬ ಭಾವನೆ ಮೂಡಿತು.

Scanned with OKEN Scanner

# ಅಲಕ್ಷಿತ ಜ್ಞಾನವಲಯ ಶೈಕ್ಷಣಿಕ ವ್ಯಾಪ್ತಿಗೆ ತನ್ನಿ

## ಕನ್ನಡ ವಿಶ್ವವಿದ್ಯಾಲಯದ ನುಡಿಹಬ್ಬ ಭಾಷಣದಲ್ಲಿ ಪ್ರೊ.ಎಸ್.ಎ.ಕೋರಿ ಸಲಹೆ

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ಅಲಕ್ಷಿತ ಜ್ಞಾನವಲಯವನ್ನು ಶೈಕ್ಷಣಿಕ ವ್ಯಾಪ್ತಿಗೆ ತಂದು ವಿದ್ಯಾರ್ಥಿಗಳ ಮುಂದಿಡುವ ಕೆಲಸವನ್ನು ಇನ್ನಷ್ಟು ಸಶಕ್ತಗೊಳಿಸಬೇಕು. ಕನ್ನಡ ವಿಶ್ವವಿದ್ಯಾಲಯದ ಉದ್ದೇಶಕ್ಕನುಗುಣವಾಗಿ ಜ್ಞಾನವನ್ನು ಕನ್ನಡದಲ್ಲಿ ಪಸರಿಸುವ ಈ ಕೈಂಕರ್ಯಕ್ಕೆ ಸಾರ್ವಜನಿಕರು, ಸರ್ಕಾರಗಳು ಬೆಂಬಲ ನೀಡಬೇಕು ಎಂದು ಅನಂತಪುರ ಕೇಂದ್ರೀಯ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಎಸ್.ಎ.ಕೋರಿ ಹೇಳಿದರು.

ಹಂಪಿ ಕನ್ನಡ ವಿಶ್ವವಿದ್ಯಾಲಯದ 32ನೇ ನುಡಿಹಬ್ಬದಲ್ಲಿ ಬುಧವಾರ ಘಟಿಕೋತ್ಸವ ಭಾಷಣ ಮಾಡಿದ ಅವರು, ಇತಿಹಾಸದ ಹಲವು ಕಾಲಘಟ್ಟಗಳಲ್ಲಿ ನಡೆದಿರಬಹುದಾದ ಸಾಂಸ್ಕೃತಿಕ ಸಂಘರ್ಷಗಳ ಕಡೆಗೆ ಗಮನಹರಿಸಿ ಪರಂಪರಾಗತ ಆರೋಗ್ಯಕರ ಮೌಲ್ಯಗಳನ್ನು ಪುನರ್‌ಸ್ಥಾಪಿಸುವ ಕಾರ್ಯವು ಇಂದು ನಡೆಯಬೇಕಾಗಿದೆ ಎಂದರು.

'ಕನ್ನಡವನ್ನು ಕಟ್ಟಿ ಬೆಳೆಸುವ ದೃಷ್ಟಿಯಿಂದ ಕನ್ನಡ ಸಂಸ್ಕೃತಿಯನ್ನು ವ್ಯಾಖ್ಯಾನಿಸುವ ದೃಷ್ಟಿಯಿಂದ, ವಿಜ್ಞಾನ ಮತ್ತು ಸಮಾಜವಿಜ್ಞಾನ ಕ್ಷೇತ್ರಗಳಲ್ಲಿ ಕನ್ನಡವನ್ನು ಅಧಿಕೃತವಾಗಿ ಬೆಳೆಸಬೇಕಾದ ದೃಷ್ಟಿಯಿಂದ ನಾವು ಎಷ್ಟು ಶ್ರಮ ಹಾಕಿದರೂ ಸಾಲದು. ಆಧುನಿಕತೆಯ ನಾಗಾಲೋಟದಲ್ಲಿ ತೃತೀಯ ಜಗತ್ತಿನ ಅನೇಕ ಭಾಷೆಗಳು ಮತ್ತು ಸಂಸ್ಕೃತಿ ಆತಂಕದ ಪರಿಸ್ಥಿತಿಯನ್ನು ಎದುರಿಸುತ್ತಿರುವ ಈ ಸಂದರ್ಭದಲ್ಲಿ ಕನ್ನಡ ವಿಶ್ವವಿದ್ಯಾಲಯದ ಜವಾಬ್ದಾರಿ ಅತ್ಯಂತ ಹೆಚ್ಚಿನದಾಗಿದೆ. ಈ ಹಿನ್ನೆಲೆಯಲ್ಲಿ ನಿರ್ಲಕ್ಷ್ಯಕ್ಕೆ ಒಳಗಾಗುತ್ತಿರುವ ಕನ್ನಡ ಭಾಷೆ ಮತ್ತು ದೇಸಿ ಸಂಸ್ಕೃತಿಯನ್ನು ಸಮೃದ್ಧಗೊಳಿಸುವ ಹಾಗೂ ಆಧುನಿಕ ಸವಾಲುಗಳಿಗೆ ಮುಖಾಮುಖಿಯಾಗಿಸುವ ನಿಟ್ಟಿನಲ್ಲಿ ನಾವು ಬೌದ್ಧಿಕವಾಗಿ ಅಣಿಯಾಗಬೇಕಾಗಿದೆ' ಎಂದರು.

'ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಚರ್ಚೆಗೊಳಗಾಗಬೇಕಾದ ಅನೇಕ ಗ್ರಂಥಗಳಿವೆ. ಕೆಲವು ಪ್ರಕಟವಾದ ಕೃತಿಗಳಲ್ಲದೆ ಹಸ್ತಪ್ರತಿಗಳ ರೂಪದಲ್ಲಿ ಬೇರೆ ಬೇರೆ ಪ್ರದೇಶಗಳಲ್ಲಿ ಲಭ್ಯವಿರಬಹುದು. ಅವುಗಳಲ್ಲಿ ಕಾವ್ಯ, ಶಾಸ್ತ್ರಗಳೇ ಮೊದಲಾದ ವಿಚಾರಗಳ ತಲಸ್ಪರ್ಶಿ ಅಧ್ಯಯನಗಳು ಆಗಬೇಕಾಗಿವೆ. ಆ ಮೂಲಕ ಕನ್ನಡ ನಾಡಿನ ಪ್ರಾಚೀನ ಜ್ಞಾನಸಂಪತ್ತನ್ನು ಸಮಕಾಲೀನ ಓದುಗರ ಮುಂದೆ ಇಡಬೇಕು' ಎಂದು ಎಸ್.ಎ.ಕೋರಿ ಹೇಳಿದರು.

'ಕರ್ನಾಟಕವು ನೆರೆಯ ಐದು ರಾಜ್ಯಗಳ ಜೊತೆ ತನ್ನ ಗಡಿಗಳನ್ನು ರಾಜಕೀಯವಾಗಿ ಹಂಚಿಕೊಂಡಿದೆ. ಗಡಿ ಪ್ರದೇಶಗಳ ಕನ್ನಡದ ವಿಭಿನ್ನ ಸಂಸ್ಕೃತಿಗಳ ಬಗೆಗೆ ಸಂಶೋಧನೆಗಳು ಇನ್ನೂ ಹೆಚ್ಚು ನಡೆಯಬೇಕಾಗಿದೆ. ಕನ್ನಡದ ಮುಖ್ಯವಾಹಿನಿಯ ಜೊತೆಗೆ ಸಂಬಂಧ ಸ್ಥಾಪಿಸುತ್ತಲೇ ನೆರೆಯ ಭಾಷೆಗಳೊಂದಿಗಿನ ಗಡಿನಾಡ ಸ್ನೇಹ ಸೌಹಾರ್ದದ ನೆಲೆಗಳನ್ನು ಶೋಧಿಸಿ ಮುನ್ನೆಲೆಗೆ ತರುವ ಕೆಲಸ ನಡೆದರೆ ಸಮಾಜಕ್ಕೆ ಕೊಡುಗೆ ನೀಡಿದಂತಾಗುತ್ತದೆ' ಎಂದು ನುಡಿದರು.

'ಆಧುನಿಕ ತಂತ್ರಜ್ಞಾನವೆಂಬುದು ವಿದ್ಯಾರ್ಥಿಗಳ ಕಲಿಕೆಗೆ ಪೂರಕವಾಗಿ ಬಳಕೆಯಾದಾಗ ಕನ್ನಡ ನೆಲದ ಬದುಕು ಹಸನಾಗಬಹುದು. ಕನ್ನಡ ಭಾಷೆಗೆ ಪ್ರಾಮುಖ್ಯತೆ ನೀಡಿ ನಡೆಯುವ ಎಲ್ಲ ಕೆಲಸಗಳು ಕನ್ನಡ ನಾಡನ್ನು ಜಾಗತಿಕ ಮಟ್ಟದಲ್ಲಿ ಅನಾವರಣಗೊಳಿಸುವ ಬಹುಮುಖ್ಯ ಕೆಲಸವಾಗಲಿದೆ. ಕನ್ನಡದ ಹೆಸರಿನ ವಿಶ್ವವಿದ್ಯಾಲಯವು ಈ ದಿಸೆಯಲ್ಲಿ ಬೆಳೆದರೆ ಕನ್ನಡ ಭಾಷೆ, ಕನ್ನಡ ಸಾಹಿತ್ಯ, ಕನ್ನಡ ಜನ, ಕನ್ನಡ ನಾಡು, ಕನ್ನಡ ನುಡಿ, ಕನ್ನಡದ ನೆಲ ಈ ಎಲ್ಲ ನೆಲೆಗಳಲ್ಲೂ ಅಭಿವೃದ್ಧಿ ಪಥದಲ್ಲಿ ಸಾಗುವಂತೆ ಮಾಡಬಹುದು' ಎಂದರು.




ಎಸ್.ಎ.ಕೋರಿ

### ಮಾಹಿತಿಗಳು ಸಂಶೋಧನೆಗಳಲ್ಲ

'ಆಧುನಿಕ ಸಾಮಾಜಿಕ ಜಾಲತಾಣಗಳು ಹಾಗೂ ವಿದ್ಯುನ್ಮಾನ ಮಾಧ್ಯಮಗಳು ಉಚಿತವಾಗಿ ಜ್ಞಾನವನ್ನು ಪಸರಿಸುವ ಕೆಲಸ ಮಾಡುತ್ತಿವೆ. ಇವುಗಳ ಅಲೆಗೆ ನಮ್ಮ ಯುವ ಜನತೆ ರೋಮಾಂಚನಗೊಂಡು ವಿದ್ವತ್ತನ್ನು ಅರಗಿಸಿಕೊಂಡವರಂತೆ ವರ್ತಿಸುತ್ತಿದ್ದಾರೆ. ಇದು ಜ್ಞಾನದ ಮೇಲ್ನೋಟದ ಅರಿವು ಮಾತ್ರ ಆಗಿರಬಹುದು. ಮಾಹಿತಿಗಳೇ ಸಂಶೋಧನೆಗಳಾಗಲಾರವು. ಆಕರಗಳ ಆಳಕ್ಕೆ ಇಳಿದು ಜ್ಞಾನವನ್ನು ಶೋಧಿಸಿ ಅದರ ಸತ್ವವನ್ನು, ಸಂದೇಶವನ್ನು ಸಮಕಾಲೀನ ಸಮಾಜಕ್ಕೆ ಕೊಡಬೇಕಾದದ್ದು ಇಂದಿನ ತುರ್ತುಗಳಲ್ಲಿ ಒಂದು' ಎಂದು ಪ್ರೊ.ಎಸ್.ಎ.ಕೋರಿ ಅಭಿಪ್ರಾಯಪಟ್ಟರು.

Scanned with OKEN Scanner



# ನಾಡೋಜ ಗೌರವ

ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಬುಧವಾರ ನಡೆದ 32ನೇ ನುಡಿಹಬ್ಬದಲ್ಲಿ, ಶಿಕ್ಷಣ ಕ್ಷೇತ್ರಕ್ಕೆ ಕೊಡುಗೆ ನೀಡಿದ ಗಣ್ಯರಾದ ಪ್ರೊ.ತೇಜಸ್ವಿ ವಿ.ಕಟ್ಟಿಮನಿ, ಬಸವಲಿಂಗ ಪಟ್ಟದ್ದೇವರು ಮತ್ತು ಪ್ರೊ.ಎಸ್.ಸಿ.ಶರ್ಮಾ ಅವರಿಗೆ ನಾಡೋಜ ಗೌರವ ಪದವಿ ಪ್ರದಾನ ಮಾಡಲಾಯಿತು. ಅಧ್ಯಯನಾಂಗದ ನಿರ್ದೇಶಕ ಪ್ರೊ.ಪಿ.ಮಹಾದೇವಯ್ಯ, ಕುಲಸಚಿವ ಪ್ರೊ. ವಿಜಯ ಪೂಣಚ್ಚ ತಂಬಂಡ, ಕುಲಪತಿ ಪ್ರೊ. ಡಿ.ವಿ.ಪರಮಶಿವಮೂರ್ತಿ, ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್, ಅನಂತಪುರ ಕೇಂದ್ರೀಯ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಎಸ್.ಎ.ಕೋರಿ ಪಾಲ್ಗೊಂಡಿದ್ದರು

Scanned with OKEN Scanner

| ಜಲಾಶಯ ಮಟ್ಟ (10-01-2024) | ಜಲಾಶಯ | ಗರಿಷ್ಠ (ಅಡಿ) | ಇಂದಿನ (ಅಡಿ) | ನೀರು ಸಂಗ್ರಹ (ಟಿಎಂಸಿ) | ಒಳಹರಿವು (ಕ್ಯೂಸೆಕ್) | ಹೊರಹರಿವು (ಕ್ಯೂ) |
|---|---|---|---|---|---|---|
| | ತುಂಗಭದ್ರಾ | 1633 | 1588.99 | 10.21 | 000 | 000 |

# ತಂತ್ರಜ್ಞಾನ ಕಲಿಕೆಗೆ ಪೂರಕವಾಗಿರಲಿ

## ಅನಂತಪುರ ಕೇಂದ್ರೀಯ ವಿವಿ ಕುಲಪತಿ ಡಾ|ಕೋರಿ ಮಾತು | ಕನ್ನಡ ಭಾಷೆಗೆ ಪ್ರಾಮುಖ್ಯತೆ ಅಗತ್ಯ

■ ಉದಯವಾಣಿ ಸಮಾಚಾರ

**ಹೊಸಪೇಟೆ:** ಆಧುನಿಕ ತಂತ್ರಜ್ಞಾನ ವಿದ್ಯಾರ್ಥಿಗಳ ಕಲಿಕೆಗೆ ಪೂರಕವಾಗಿ ಬಳಕೆಯಾದಾಗ ಕನ್ನಡ ನೆಲದ ಬದುಕು ಹಸನಾಗಲಿದೆ ಎಂದು ಆಂಧ್ರ ಪ್ರದೇಶದ ಅನಂತಪುರ ಕೇಂದ್ರೀಯ ವಿಶ್ವವಿದ್ಯಾಲಯದ ಕುಲಪತಿ ಡಾ|ಎಸ್.ಎ.ಕೋರಿ ಹೇಳಿದರು.

ಕನ್ನಡ ವಿಶ್ವವಿದ್ಯಾಲಯದ ನವರಂಗ ಬಯಲು ರಂಗಮಂದಿರದಲ್ಲಿ ಬುಧವಾರ 32 ನೇ ನುಡಿಹಬ್ಬ ಘಟಿಕೋತ್ಸವ ಭಾಷಣ ಮಾಡಿದ ಅವರು, ಕನ್ನಡ ಭಾಷೆಗೆ ಪ್ರಾಮುಖ್ಯತೆ ನೀಡಿ ನಡೆಯುವ ಎಲ್ಲ ಕೆಲಸಗಳು ಕನ್ನಡ ನಾಡನ್ನು ಜಾಗತಿಕ ಮಟ್ಟದಲ್ಲಿ ಅನಾವರಣ ಗೊಳಿಸುವಲ್ಲಿ ಬಹುಮುಖ್ಯ ಪಾತ್ರವಹಿಸುತ್ತವೆ ಎಂದರು.

ಆಧುನಿಕ ಸಾಮಾಜಿಕ ಜಾಲತಾಣಗಳು ಹಾಗೂ ವಿದ್ಯುನ್ಮಾನ ಮಾಧ್ಯಮಗಳು ಉಚಿತ ಜ್ಞಾನವನ್ನು ಪಸರಿಸುವ ಕೆಲಸ ಮಾಡುತ್ತಿವೆ. ಇವುಗಳ ಅಲೆಗೆ ನಮ್ಮ ಯುವಜನತೆ ರೋಮಾಂಚನಗೊಂಡು ವಿದ್ವತ್ತನ್ನು ಅರಗಿಸಿಕೊಂಡವರಂತೆ ವರ್ತಿಸುತ್ತಿದ್ದಾರೆ. ಮಾಹಿತಿಗಳೇ ಸಂಶೋಧನೆಗಳಾಗಲಾರವು. ಆಕರಗಳ ಆಳಕ್ಕೆ ಇಳಿದು ಜ್ಞಾನವನ್ನು ಶೋಧಿಸಿ ಅದರ ಸತ್ವ ಸಂದೇಶವನ್ನು ಸಮಕಾಲೀನ ಸಮಾಜಕ್ಕೆ ಕೊಡಬೇಕಾದದ್ದು ಇಂದಿನ ತುರ್ತುಗಳಲ್ಲಿ ಒಂದಾಗಿದೆ ಎಂದ ಅವರು, ವಿಜ್ಞಾನ, ಕಲೆ, ಸಾಹಿತ್ಯ, ಸಂಸ್ಕೃತಿ, ಜನಪದ ಹೀಗೆ ಎಲ್ಲ ಕ್ಷೇತ್ರಗಳಲ್ಲಿ ಜ್ಞಾನವನ್ನು ಶೋಧಿಸಿ ಸಮಾಜಮುಖಿಯಾಗಿ ಮಂಡಿಸುವ ಕೆಲಸ ಆಗಬೇಕಿದೆ ಎಂದರು.

ಶೈಕ್ಷಣಿಕ ಕ್ಷೇತ್ರದ ಡಿಜಿಟಲೀಕರಣವು ಶಿಕ್ಷಣ ಕ್ಷೇತ್ರದಲ್ಲಿ ಹೊಸದೊಂದು ಜ್ಞಾನದ ಬಾಗಿಲನ್ನು ತೆರೆದಿಟ್ಟಿದೆ. ವಿದ್ಯಾರ್ಥಿಗಳು ತಮ್ಮ ಕಲಿಕೆಗೆ ಇವುಗಳನ್ನು ಪೂರಕವಾಗಿ ಬಳಸಿಕೊಂಡಲ್ಲಿ ಬದುಕಿನ ನೆಲೆಗಳನ್ನು ಕಂಡುಕೊಳ್ಳಬಹುದು ಎಂದ ಅವರು, ಆಧುನಿಕ ತಂತ್ರಜ್ಞಾನದ ಮೂಲಕ ಶಿಕ್ಷಣದಲ್ಲಿ ಕಲಿಕೆಯ ರೂಪ ಬದಲಾಗುತ್ತ ಸಾಗಿದೆ. ಈ ದಿಸೆಯಲ್ಲಿ ಆಧುನಿಕ ತಂತ್ರಜ್ಞಾನದಲ್ಲಿ ಪರಿಣತಿಯನ್ನು ಪಡೆದು ತಮ್ಮ ಕೌಶಲ್ಯವನ್ನು ಹೆಚ್ಚಿಸಿಕೊಳ್ಳುವುದು ಅನಿವಾರ್ಯವಾಗಿದೆ ಎಂದರು.



ಹೊಸಪೇಟೆ: ಕನ್ನಡ ವಿವಿ ಘಟಿಕೋತ್ಸವ ಸಮಾರಂಭದಲ್ಲಿ ಉನ್ನತ ಶಿಕ್ಷಣ ಸಚಿವ ಡಾ|ಎಂ.ಸಿ.ಸುಧಾಕರ್ ಮಾತನಾಡಿದರು.

### ದೇಶಿ ಉಡುಗೆ ವೈಶಿಷ್ಟ್ಯ

**ಹೊಸಪೇಟೆ:** ಕನ್ನಡ ವಿವಿಯ ಸಂಪ್ರದಾಯದಂತೆ ದೇಶಿ ಉಡುಗೆ ತೊಡುಗೆಯಲ್ಲಿ ವಾದ್ಯ ಮೇಳದೊಂದಿಗೆ ಭವ್ಯ ಮೆರವಣಿಗೆ ಮೂಲಕ ಗಣ್ಯರನ್ನು ನವರಂಗ ಬಯಲು ಮಂದಿರ ವೇದಿಕೆಗೆ ಕರೆ ತರಲಾಯಿತು. ಸಮಾರಂಭದ ಮೊದಲು ಕಲಶ ಸ್ಥಾಪನೆ, ವಿವಿಯ ವಿದ್ಯಾರ್ಥಿಗಳಿಂದ ಪ್ರಾರ್ಥನೆ ನಡೆಯಿತು. ಸಮಕುಲಾಧಿಪತಿ ಹಾಗೂ ಉನ್ನತ ಶಿಕ್ಷಣ ಸಚಿವರಿಂದ ಘಟಿಕೋತ್ಸವ ಪ್ರಾರಂಭದ ಘೋಷಣೆ ಮಾಡಲಾಯಿತು. ಕುಲಪತಿಗಳು ಗಣ್ಯರನ್ನು ಸ್ವಾಗತಿಸಿದರು. ಕುಲಾಧಿಪತಿಗಳಿಂದ ಸಾಧಕರಿಗೆ ನಾಡೋಜ ಪದವಿ ಪ್ರದಾನ ಮಾಡಲಾಯಿತು. ಸಮಾರಂಭದಲ್ಲಿ ಒಬ್ಬರಿಗೆ ಡಿ.ಲಿಟ್ ಹಾಗೂ 275 ವಿದ್ಯಾರ್ಥಿಗಳಿಗೆ ಪಿಎಚ್‌ಡಿ ಪದವಿ ಪ್ರದಾನ ಮಾಡಲಾಯಿತು. ಕುಲಸಚಿವರು ವಂದಿಸಿದರು.



ಹೊಸಪೇಟೆ: ಕನ್ನಡ ವಿವಿ ಸಂಪ್ರದಾಯದಂತೆ ದೇಶಿ ಉಡುಗೆಯಲ್ಲಿ ಗಣ್ಯರನ್ನು ನವರಂಗ ಬಯಲು ಮಂದಿರ ವೇದಿಕೆಗೆ ಕರೆ ತರಲಾಯಿತು.

ಆಧುನಿಕ ಜ್ಞಾನ, ವಿಜ್ಞಾನ ಕ್ಷೇತ್ರಗಳ ಸಾಧನೆಗಳನ್ನು ಅರಿತುಕೊಳ್ಳಬೇಕಾದ ಅಗತ್ಯ ಹಿಂದೆಂದಿಗಿಂತಲೂ ಇಂದು ಹೆಚ್ಚಾಗಿದೆ ಎಂದ ಅವರು, ಅದಕ್ಕಾಗಿ ವಿದ್ಯಾರ್ಥಿಗಳು ಅನುವಾದ ಕೌಶಲ್ಯಗಳನ್ನು ಬೆಳೆಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಉನ್ನತ ಶಿಕ್ಷಣ ಸಚಿವ ಡಾ|ಎಂ.ಸಿ.ಸುಧಾಕರ್ ಮಾತನಾಡಿ, ಕನ್ನಡ ವಿಶ್ವವಿದ್ಯಾಲಯ ಎದುರಿಸುತ್ತಿರುವ ಆರ್ಥಿಕ ಬಿಕ್ಕಟ್ಟು ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯನವರ ಗಮನಕ್ಕೆ ತರಲಾಗುವುದು. ಆದಷ್ಟು ಬೇಗ ಪರಿಹಾರಗಳನ್ನು ಕಂಡುಕೊಂಡು ಕನ್ನಡ ವಿಶ್ವವಿದ್ಯಾಲಯದ ಶೈಕ್ಷಣಿಕ ಚಟುವಟಿಕೆಗಳು, ಅಭಿವೃದ್ಧಿ ಕಾರ್ಯಗಳು ಮತ್ತಷ್ಟು ಹೊಸ ಹುರುಪು ಹಾಗೂ ಹೊಳಪಿನೊಂದಿಗೆ ನಡೆಯಲು ಬೇಕಾದ ವಾತಾವರಣದ ಸೃಷ್ಟಿಗೆ ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದರು.

ಕನ್ನಡ ವಿವಿ ಕುಲಪತಿ ಡಾ|ಡಿ.ವಿ. ಪರಮಶಿವಮೂರ್ತಿ ಸ್ವಾಗತಿಸಿ ಮಾತನಾಡಿ, ಕನ್ನಡವು ಅನ್ನದ ಭಾಷೆಯಾಗಬೇಕೆಂಬ ಕೂಗು ಮತ್ತು ಒತ್ತಾಯಗಳು ಆಗಾಗ ಕಂಡುಬರುತ್ತಿವೆ. ವಿಜ್ಞಾನ, ತಂತ್ರಜ್ಞಾನ, ವೃತ್ತಿಪರ ಪದವಿಗಳ ಪಠ್ಯಗಳು ಕನ್ನಡ ಭಾಷೆಯಲ್ಲಿ ಪ್ರಕಟವಾಗಬೇಕಿದೆ ಎಂದು ಹೇಳಿದರು.

ಕನ್ನಡ ಮಾಧ್ಯಮದಲ್ಲಿ ಅಧ್ಯಯನ ಮಾಡಿದ ವಿದ್ಯಾರ್ಥಿಗಳಲ್ಲಿ ತಮ್ಮ ಪ್ರತಿಭೆಯನ್ನು ಉನ್ನತ ಮಟ್ಟಕ್ಕೆ ಮುಟ್ಟಿಸುವ ಆತ್ಮಸ್ಥೈರ್ಯ ಮೂಡಿಸಬೇಕಿದೆ ಎಂದ ಅವರು, ಶಿಕ್ಷಣ ಸಂಸ್ಥೆಗಳು, ಶಿಕ್ಷಣ ತಜ್ಞರು ಮತ್ತು ಸರ್ಕಾರ ಒಟ್ಟಾಗಿ ಕುಳಿತು ಯೋಜನೆಗಳನ್ನು ರೂಪಿಸಬೇಕಿದೆ ಎಂದು ಹೇಳಿದರು.


ಪ್ರತಿಷ್ಠಿತ ನಾಡೋಜ ಪ್ರಶಸ್ತಿ ಸ್ವೀಕರಿಸಿದ ಶ್ರೀ ಬಸವಲಿಂಗ ಪಟ್ಟದೇವರು, ಡಾ|ಟಿ.ವಿ.ಕಟ್ಟಿಮನಿ ಡಾ|ಎಸ್.ಸಿ.ಶರ್ಮಾ, ಜನಪ್ರತಿನಿಧಿಗಳು, ಅಧಿಕಾರಿಗಳು ಡಿ.ಲಿಟ್. ಪಿಎಚ್‌ಡಿ. ಪದವಿ ಪಡೆದವರು, ಅಧ್ಯಾಪಕರು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.







**ನುಡಿಹಬ್ಬದಲ್ಲಿ ಕೇರಳ ಹಾಗೂ ತಮಿಳುನಾಡಿನ ಗಡಿಯಲ್ಲಿರುವ ಮೈಸೂರು ಹೆಗ್ಗಡದೇವನಕೋಟೆ ಅಂತರಸಂತೆ ಹೋಬಳಿಯ ಡಿಬಿ ಕುಪ್ಪೆ ಗ್ರಾಮ ಪಂಚಾಯಿತಿ ಸೇಬಿನಕೊಲ್ಲೆ ಹಾಳು ಹಾಡಿಯ ಅತಿ ಕಡಿಮೆ ಜನಸಂಖ್ಯೆ ಇರುವ ಪಣಿಯನ್ ಬುಡಕಟ್ಟು ಸಮುದಾಯದ ದಿವ್ಯ ಎಸ್.ಆರ್. ಸೇರಿದಂತೆ ಒಟ್ಟು 275 ಸಂಶೋಧನಾರ್ಥಿಗಳಿಗೆ ಪಿಎಚ್‌ಡಿ ಪದವಿ ಪ್ರದಾನವಾಯಿತು. ಭಾಷಾ ನಿಕಾಯದ 104, ಸಮಾಜವಿಜ್ಞಾನ ನಿಕಾಯದಲ್ಲಿ 167, ಲಲಿತಕಲೆಗಳ ನಿಕಾಯ 4 ಸೇರಿ ಒಟ್ಟು 275 ವಿದ್ಯಾರ್ಥಿಗಳಿಗೆ ಪಿಎಚ್‌ಡಿ ಪದವಿ ಪ್ರದಾನ ಮಾಡಲಾಯಿತು.**



**ಹೊಸಪೇಟೆ: ನಗರದ ತಳವಾರಕೇರಿ ನಿವಾಸಿ ಪೂಜಾರಿ ಯಲ್ಲೇಶಗೆ ಹಂಪಿ ಕನ್ನಡ ವಿವಿ ಪಿಎಚ್‌ಡಿ ಪದವಿ ನೀಡಿದೆ. ಉನ್ನತ ಶಿಕ್ಷಣ ಸಚಿವ ಡಾ|ಎಂಸಿ ಸುಧಾಕರ್ ಪಿಎಚ್‌ಡಿ ಪ್ರದಾನ ಮಾಡಿದರು.**

Scanned with OKEN Scanner



The research scholars who received PhD degrees during the 32nd Nudi Habba in Hampi Kannada University in Hosapete on Wednesday. DH PHOTO

# Minister promises to tackle fund crunch of Hampi varsity

## 32nd convocation of Hampi Kannada University held

HOSAPETE (VIJAYANAGARA), DHNS

Sincere efforts would be made to find solutions for the financial crunch of Hampi Kannada University and create a conducive environment for more academic activities, said Higher Education Minister M C Sudhakar.

Speaking after conferring DLitt and PhD degrees at the 32nd Nudi Habba of Hampi Kannada University here on Wednesday, he said that the chief minister himself had stressed the need of having 60% of commercial boards in Kannada.

He would also address the financial difficulties of Kannada University with the same concern, he said.

The Kannada University has a collective consciousness that the university should not be a centre of power but a centre of study. Providing degrees or education alone is not the ultimate goal of the university but to achieve the development of Kannada language. The university has reached many heights in its efforts to achieve its goal. It is not right for a proud university to face difficulties in its research, development and management activities due to lack of funds, he said.

"The study of Kannada language, literature, culture and history is nothing but the study of human beings. The study of history, sociology, anthropology, folklore, tribal culture, fine arts, and science have a cordial relation with the study of language," the minister said.

### Nadoja Award

Basavalinga Pattadevaru of Bhalki Hiremath Samsthan in Bidar district, who worked in the fields of Kannada language, literature, culture, society and art, Andhra Pradesh Central Tribal University Vice-Chancellor T V Kattimani and former vice-chancellor S C Sharma were honoured with Nadoja Award.

Vice-Chancellor D V Paramasivamurthy, who delivered the welcome address, provided detailed information about the goals and achievements of the university.

### Real knowledge

The advanced social and electronic media have been working to spread knowledge free of cost and the youths who are thrilled with such a wave have started behaving as if they have assimilated great scholarship, but in reality, it may be a superficial awareness of knowledge, said Anantapur Central University Vice-Chancellor S A Kori.

Delivering the convocation address at the 32nd convocation of Hampi Kannada University here on Wednesday, he said that information cannot be research. The need of the hour is to go deep into the sources and explore the knowledge and convey its essence and message to contemporary society, he said.

Traditional healthy values should be restored today by focusing on the cultural conflicts which may have taken place at various points in history. The Kannada University gains utmost importance when many languages and cultures of the third world have been facing a threat amid modernisation. "We should be intellectually prepared to enrich the Kannada language and native culture and combat the modern challenges," he said.

Scanned with OKEN Scanner